ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ
ಸೋಮವಾರ, ಅಕ್ಟೋಬರ್ 11, 2021

ಸಂಪುಟ : 48 ಸಂಚಿಕೆ : 151 ☎ 254736 91642 99999 RNI No: 27369/75 KA/SK/CTA-275/2021-2023. O/P @ B.V. Nagar P.O. ಪುಟ : 6 ರೂ : 4.00 www.janathavani.com janathavani@mac.com



## ದಸರಾ: ಮಹಿಳಾ ಬೈಕ್ ರ್‍ಯಾಲಿಗೆ ಸಂಸದ ಸಿದ್ದೇಶ್ವರ ಚಾಲನೆ

ದಾವಣಗೆರೆ, ಅ.10- ಸಾರ್ವಜನಿಕ ವಿಜಯದಶಮಿ ಮಹೋತ್ಸವದ ಅಂಗವಾಗಿ ವಿಶ್ವ ಹಿಂದೂ ಪರಿಷದ್ ಮತ್ತು ಸಾರ್ವಜನಿಕ ವಿಜಯದಶಮಿ ಮಹೋತ್ಸವ ಸಮಿತಿ ಹಾಗೂ ಹಿಂದೂ ಜಾಗರಣ ವೇದಿಕೆ ಇವರುಗಳ ಸಂಯುಕ್ತಾಶ್ರಯದಲ್ಲಿ ಇಂದು ಏರ್ಪಡಿಸಿದ್ದ ಮಹಿಳಾ ಮೋಟಾರ್ ಬೈಕ್ ರ್‍ಯಾಲಿಗೆ ಹರಳೆಣ್ಣೆ ಕೊಟ್ರಬಸಪ್ಪ ವೃತ್ತದಲ್ಲಿ ಶನಿವಾರ ಸಂಸದ ಜಿ.ಎಂ. ಸಿದ್ದೇಶ್ವರ ಚಾಲನೆ ನೀಡಿದರು.

ನಗರ ಪಾಲಿಕೆ ಮೇಯರ್ ಎಸ್.ಟಿ. ವೀರೇಶ್, ದೂಡಾ ಅಧ್ಯಕ್ಷ ದೇವರಮನೆ ಶಿವಕುಮಾರ್, ಪಾಲಿಕೆ ನಾಮನಿರ್ದೇಶಿತ ಸದಸ್ಯರಾದ ಶಿವನಗೌಡ ಟಿ. ಪಾಟೀಲ್, ಕು.ಹೆಚ್.ಸಿ. ಜಯಮ್ಮ, ಸಾರ್ವಜನಿಕ ವಿಜಯದಶಮಿ ಮಹೋತ್ಸವದ ಸಂಚಾಲಕ ಸತೀಶ್ ಪೂಜಾರಿ, ಟಿಂಕರ್ ಮಂಜಣ್ಣ, ಗೋಪಾಲರಾವ್ ಸಾವಂತ್, ಜೊಳ್ಳಿ ಗುರು, ರಾಜು ಬೇಕರಿ, ಪ್ರಕಾಶ್ ತೇಲ್ಕರ್ ಹಾಗೂ ಇತರರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

# ದುಷ್ಟರ ನಿಗ್ರಹ, ಶಿಷ್ಟರ ರಕ್ಷಣೆಯ ಸಂಕಲ್ಪದ ಆಚರಣೆಯೇ ನವರಾತ್ರಿ

ಹೊನ್ನಾಳಿ, ಸೆ. 10- ದುಷ್ಟ ಶಕ್ತಿಗಳನ್ನು ನಿಗ್ರಹಿಸಿ, ಶಿಷ್ಟರ ರಕ್ಷಣೆಗೆ ಸಂಕಲ್ಪ ಮಾಡುವ ಮಹತ್ವದ ಆಚರಣೆಯೇ ನವರಾತ್ರಿ ಹಬ್ಬ ಎಂದು ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಹೇಳಿದರು.

ಇಲ್ಲಿನ ಹಿರೇಕಲ್ಮಠದಲ್ಲಿ ನಡೆದ ಶರನ್ನವರಾತ್ರಿ ದಸರಾ ಮಹೋತ್ಸವದ ಧರ್ಮಸಭೆ ಉದ್ಘಾಟಿಸಿ ಅವರು ಮಾತನಾಡಿದರು.

ದೇವಿಗೆ ವಿವಿಧ ಅಲಂಕಾರ ಮಾಡಿ ಭಕ್ತರು ಸಂಭ್ರಮಿಸುತ್ತಾರೆ. ಜನರಲ್ಲಿ ಭಕ್ತಿಯ ಹೊನಲು ಹರಿಸುವ ನವರಾತ್ರಿ ಆಚರಣೆ ನಾಡಿನ ಸಾಂಸ್ಕೃತಿಕ ಹಿರಿಮೆಯ ಸಂಕೇತ. ವಿಜಯನಗರದ ಅರಸರ ಕಾಲದಿಂದ ಆಚರಿಸಲ್ಪಡುತ್ತಿರುವ ನಾಡಹಬ್ಬ ದಸರಾವನ್ನು ಮೈಸೂರು ಅರಸರು ಅತಿ ವಿಜೃಂಭಣೆಯಿಂದ ಆಚರಿಸಲು ಮುಂದಾದರು. ಅದರಂತೆ ನಾಡಿನ ವಿವಿಧ ಮಠ-ಮಾನ್ಯಗಳೂ ತಂತಮ್ಮ ವ್ಯಾಪ್ತಿಯಲ್ಲಿ ವೈಭವದ ದಸರಾ ಆಚರಿಸುವಂತೆ ಹೊನ್ನಾಳಿಯ ಹಿರೇಕಲ್ಮಠವು ಈ ಕಾರ್ಯ ನಡೆಸುವ ಮೂಲಕ ಭಕ್ತರಿಗೆ ಹತ್ತಿರವಾಗಿದೆ ಎಂದರು.

ಸಂಸದ ಬಿ.ವೈ. ರಾಘವೇಂದ್ರ ಮಾತನಾಡಿ, ಹೊನ್ನಾಳಿಯ ಹಿರೇಕಲ್ಮಠದಿಂದ ಅನೇಕ ಸಮಾಜಮುಖಿ ಕಾರ್ಯಕ್ರಮಗಳು ನಡೆಯುತ್ತಿವೆ. ಇಂಥ ಮಠದ ಆಶ್ರಯದಲ್ಲಿರುವ ಭಕ್ತರು ನಿಜಕ್ಕೂ ಪುಣ್ಯವಂತರು ಎಂದು ಹೇಳಿದರು.

ಹೊನ್ನಾಳಿಯ ಹಿರೇಕಲ್ಮಠದ ವತಿಯಿಂದ 2020ರಲ್ಲಿ ಆಯೋಜಿಸಲಾಗಿದ್ದ ಕೃಷಿ ಮೇಳ ಮಾದರಿಯಾದುದು. ಆ ರೀತಿಯ ಕಾರ್ಯಕ್ರಮಗಳು ಹೆಚ್ಚು ಹೆಚ್ಚಾಗಿ ನಡೆಯಬೇಕು ಎಂದು ತಿಳಿಸಿದರು.

ಸಿಎಂ ರಾಜಕೀಯ ಕಾರ್ಯದರ್ಶಿ (4ನೇ ಪುಟಕ್ಕೆ)



ಹೊನ್ನಾಳಿ ಹಿರೇಕಲ್ಮಠದಲ್ಲಿ ನಡೆದ ಶರನ್ನವರಾತ್ರಿ ದಸರಾ ಮಹೋತ್ಸವದ ಧರ್ಮಸಭೆ ಉದ್ಘಾಟಿಸಿದ ಮಾಜಿ ಸಿಎಂ ಬಿ.ಎಸ್. ಯಡಿಯೂರಪ್ಪ

## 'ಮಿಸೆಸ್ ಇಂಡಿಯಾ' ಕಿರೀಟ ಧರಿಸಿದ ರಶ್ಮಿ

ದಾವಣಗೆರೆ,ಅ.10- ರಾಜಸ್ಥಾನ ರಾಜ್ಯದ ಜೈಪುರದಲ್ಲಿ ಮೊನ್ನೆ ನಡೆದ 'ಮಿಸೆಸ್ ಇಂಡಿಯಾ ಐ ಆಮ್ ಪವರ್‌ಫುಲ್' ರಾಷ್ಟ್ರೀಯ ಮಟ್ಟದ ಸ್ಪರ್ಧೆಯಲ್ಲಿ ದಾವಣಗೆರೆ ಜಿಲ್ಲೆಯ ಮೂಲದವರಾದ ಶ್ರೀಮತಿ ರಶ್ಮಿ ರಂಗಪ್ಪ ಅವರು ಐ ಆಮ್ ಪವರ್‌ಫುಲ್ ವರ್ಲ್ಡ್ ವಿಭಾಗದಲ್ಲಿ ಕಿರೀಟ ಧರಿಸುವಲ್ಲಿ ಯಶಸ್ವಿಯಾಗಿದ್ದಾರೆ.

ಈ ಸ್ಪರ್ಧೆಯಲ್ಲಿ ರಶ್ಮಿ ರಂಗಪ್ಪ ಅವರಲ್ಲದೇ, ಶಿಲ್ಪಾ ಸುಧಾಕರ್, ಸುಪ್ರೀತಾ ಹಾಗೂ ಕಾವ್ಯ ಅವರುಗಳು ಪ್ರಶಸ್ತಿ ಗೆದ್ದುಕೊಂಡರು.

ಮಿಸೆಸ್ ಇಂಡಿಯಾ ಐ ಆಮ್ ಪವರ್‌ಫುಲ್ ಯೂನಿವರ್ಸ್ ವಿಭಾಗದ ಕಿರೀಟವನ್ನು ಶಿಲ್ಪಾ ಗೆದ್ದುಕೊಂಡರೆ, ಐ ಆಮ್ ಪವರ್‌ಫುಲ್ ವರ್ಲ್ಡ್ ವಿಭಾಗದಲ್ಲಿ ರಶ್ಮಿ ರಂಗಪ್ಪ, ಏಷ್ಯಾ ವಿಭಾಗದಲ್ಲಿ ಸುಪ್ರೀತಾ, ಕವಿರ್ ವರ್ಲ್ಡ್ ವಿಭಾಗದಲ್ಲಿ ಕಾವ್ಯ ಕಿರೀಟ ಜಯಿಸಿದರು.



ಉಳಿದಂತೆ ನಿರ್ಮಲಾ, ಹೇಮಾ, ಸ್ನೇಹ, ಸಿಂಧು ರನ್ನರ್ ಅಪ್ ಆದರು. ನಂದಿನಿ ನಾಗರಾಜ್ ಹಾಗೂ ಜಸ್ಪ್ರೀತ್ ಅವರು ಆಯೋಜಿಸಿದ್ದ ಕಾರ್ಯಕ್ರಮಕ್ಕೆ ಬೆಂಗಳೂರಿನಿಂದ 10 ಜನ ರೂಪದರ್ಶಿಯರ ತಂಡ ಜೈಪುರಕ್ಕೆ ತೆರಳಿತ್ತು. ಒಟ್ಟು 40 ಜನ ಸ್ಪರ್ಧಿಗಳು ಈ ಸ್ಪರ್ಧೆಯಲ್ಲಿ ಭಾಗವಹಿಸಿದ್ದರು.

ವಿಂಟೇಜ್, ಗೌನ್, ಎಥ್ನಿಕ್, ಟ್ಯಾಲೆಂಟ್ ಸುತ್ತುಗಳಲ್ಲಿ ರೂಪದರ್ಶಿಯರು ರ್‍ಯಾಂಪ್ ಮೇಲೆ ಹೆಜ್ಜೆ ಹಾಕಿ ನೆರೆದಿದ್ದ ಪ್ರೇಕ್ಷಕರ ಕಣ್ಮನ ತಣಿಸಿದರು. 'ತೆಳ್ಳಗೆ, ಬೆಳ್ಳಗೆ ಇರುವವರು ಅಥವಾ ಎತ್ತರ, ದಪ್ಪ, ವಯಸ್ಸನ್ನು ನೋಡಿ ಈ ಸ್ಪರ್ಧೆಗೆ ಆಯ್ಕೆ ಮಾಡಲಾಗಿಲ್ಲ. ಬದಲಾಗಿ ಅವರಿಗೆ ಇರುವಂಥ ಅರ್ಹತೆ ಹಾಗೂ ಆತ್ಮವಿಶ್ವಾಸವೇ ನಮ್ಮ ಸ್ಪರ್ಧೆಯ ಮಾನದಂಡವಾಗಿತ್ತು' ಎಂದು ಈ ಕಾರ್ಯಕ್ರಮವನ್ನು ಆಯೋಜನೆ ಮಾಡಿದ್ದ ನಂದಿನಿ (4ನೇ ಪುಟಕ್ಕೆ)

## ಮಕ್ಕಳನ್ನು ಹೆರಲು ಹಿಂದೇಟು ಹಾಕುವ ಆಧುನಿಕ ಸ್ತ್ರೀ

ಬೆಂಗಳೂರು, ಅ. 10- ದೇಶದಲ್ಲಿನ ಯುವತಿಯರು ವಿವಾಹದ ನಂತರ ಮಕ್ಕಳಿಗೆ ಜನ್ಮ ನೀಡಲು ಇಷ್ಟ ಪಡುತ್ತಿಲ್ಲ. ಬದಲಾಗಿ ಬಾಡಿಗೆ ತಾಯ್ತನ ಬಯಸುತ್ತಿದ್ದಾರೆ.

ಅಲ್ಲದೇ ಅನೇಕರು ಒಬ್ಬರೇ ಜೀವನ ನಡೆಸಲು ಬಯಸುತ್ತಿದ್ದಾರೆ ಎಂದು ಆರೋಗ್ಯ ಸಚಿವ ಡಾ.ಕೆ. ಸುಧಾಕರ್ ಹೇಳಿದ್ದಾರೆ.

ರಾಷ್ಟ್ರೀಯ ಮಾನಸಿಕ ಆರೋಗ್ಯ ಮತ್ತು ನರ ವಿಜ್ಞಾನ ಸಂಸ್ಥೆಯು (ನಿಮ್ಹಾನ್ಸ್) ಭಾನುವಾರ ಹಮ್ಮಿಕೊಂಡಿದ್ದ ವಿಶ್ವ ಮಾನಸಿಕ ಆರೋಗ್ಯ ದಿನ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಅವರು ಮಾತನಾಡಿದರು.



ಪಾಶ್ಚಿಮಾತ್ಯ ಸಂಸ್ಕೃತಿಯ ಹಾದಿಯಲ್ಲಿ ಸಾಗುತ್ತಿರುವ ನಾವು, ತಂದೆ–ತಾಯಿಯ ಜೊತೆಗೆ ಇರಲೂ ಇಷ್ಟಪಡುತ್ತಿಲ್ಲ ಎಂದು ಸುಧಾಕರ್ ಇದೇ ವೇಲೆ ಬೇಸರ ವ್ಯಕ್ತಪಡಿಸಿದರು.



ಸ್ಪರ್ಧಾತ್ಮಕ ಜಗತ್ತಿನಲ್ಲಿ ನಾವೆಲ್ಲ ಒಬ್ಬರಿಗೊಬ್ಬರು ಪ್ರತಿಸ್ಪರ್ಧಿಗಳಾಗಿದ್ದೇವೆ. ಐಟಿ, ಕೃಷಿ ಸೇರಿದಂತೆ ಪ್ರತಿ ವೃತ್ತಿಯಲ್ಲೂ ಜನ ಒತ್ತಡಗಳನ್ನು ಎದುರಿಸುತ್ತಾರೆ.

ನಮ್ಮ ಪೂರ್ವಜರು ಕೊಡುಗೆಯಾಗಿ ನೀಡಿರುವ ಯೋಗ, ಧ್ಯಾನ ಮತ್ತು ಪ್ರಾಣಾಯಾಮ ಅದ್ಭುತವಾದ ಸಾಧನಗಳು. ಪ್ರತಿ ಮಾನಸಿಕ ಸಮಸ್ಯೆಗೂ ನಮ್ಮಲ್ಲಿ ಚಿಕಿತ್ಸೆ ಇದೆ ಎಂದು ಸಲಹೆ ನೀಡಿದರು.



**ವಿಶೇಷಾಲಂಕಾರ** ದಾವಣಗೆರೆ ವಿದ್ಯಾನಗರದಲ್ಲಿನ ಶ್ರೀ ಈಶ್ವರ, ಪಾರ್ವತಿ, ಗಣಪತಿ ದೇವಸ್ಥಾನ ಹಾಗೂ ನಿಟುವಳ್ಳಿಯ ಶ್ರೀ ದುರ್ಗಾಂಬಿಕಾ ದೇವಿ ದೇವಸ್ಥಾನ ಮತ್ತು ಶಿರಮಗೊಂಡನಹಳ್ಳಿಯ ಶ್ರೀ ಕಟ್ಟೆ ದುರುಗಮ್ಮ ದೇವಸ್ಥಾನ ಹಾಗೂ ಕಾಳಿಕಾದೇವಿ ರಸ್ತೆಯ ಶ್ರೀ ಕಾಳಿಕಾದೇವಿ ದೇವಸ್ಥಾನಗಳಲ್ಲಿ ನವರಾತ್ರಿ ಮಹೋತ್ಸವದ ಅಂಗವಾಗಿ ಶ್ರೀ ದೇವಿಗೆ ವಿಶೇಷ ಅಲಂಕಾರ ಮಾಡಲಾಗಿತ್ತು.

## ರಸ್ತೆ ಅಭಿವೃದ್ಧಿ ಕಾಮಗಾರಿಗೆ ಸಂಸದರ ಚಾಲನೆ

### 17ನೇ ವಾರ್ಡ್‌ನಲ್ಲಿ 2 ಕೋಟಿ, 22ನೇ ವಾರ್ಡ್‌ನಲ್ಲಿ 90 ಲಕ್ಷ ವೆಚ್ಚದ ಕಾಮಗಾರಿ

ದಾವಣಗೆರೆ, ಅ.10- ಮಹಾನಗರ ಪಾಲಿಕೆ ವ್ಯಾಪ್ತಿಯ 17 ಮತ್ತು 22ನೇ ವಾರ್ಡ್‌ಗಳಲ್ಲಿ ಒಟ್ಟು 2.90 ಕೋಟಿ ರೂ.ಗಳ ವೆಚ್ಚದ ರಸ್ತೆ ಅಭಿವೃದ್ಧಿ ಕಾಮಗಾರಿಗಳಿಗೆ ಇಂದು ಚಾಲನೆ ದೊರಕಿತು.

**17ನೇ ವಾರ್ಡ್ :** ಈ ವಾರ್ಡಿನ ಪಿ.ಜೆ. ಬಡಾವಣೆ ವ್ಯಾಪ್ತಿಯಲ್ಲಿ ಅಲ್ಪಸಂಖ್ಯಾತರ ವಿಶೇಷ ಅನುದಾನದಡಿ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಸೇಂಟ್ ಪಾಲ್ಸ್ ಕಾನ್ವೆಂಟ್ ರಸ್ತೆಯಲ್ಲಿ ಸಂಸದ ಜಿ.ಎಂ. ಸಿದ್ದೇಶ್ವರ, ಶಾಸಕ ಎಸ್.ಎ. ರವೀಂದ್ರನಾಥ್ ಸೇರಿದಂತೆ ಇತರರು ಭೂಮಿ ಪೂಜೆ ನೆರವೇರಿಸುವ ಮೂಲಕ ವಿಧ್ಯುಕ್ತವಾಗಿ ಚಾಲನೆ ನೀಡಿದರು.

ಜಿಲ್ಲಾ ಪಂಚಾಯತ್‌ನ ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗದಿಂದ ಈ ಕಾಮಗಾರಿ ಕೈಗೆತ್ತಿಕೊಳ್ಳಲಾಗಿದ್ದು, ಅಂದಾಜು 200 ಲಕ್ಷ ವೆಚ್ಚದ ಕಾಮಗಾರಿ ಇದಾಗಿದ್ದು, ಈ ಪೈಕಿ 60 ಲಕ್ಷ ವೆಚ್ಚದಲ್ಲಿ 350 ರಿಂದ 400 ಮೀಟರ್ ನಷ್ಟು ಸಿಸಿ ರಸ್ತೆ ನಿರ್ಮಾಣ, 60 ಲಕ್ಷ ವೆಚ್ಚದಲ್ಲಿ 400 ಮೀಟರ್ ಸಿಸಿ ಡ್ರೈನ್ ನಿರ್ಮಾಣ, ಇನ್ನುಳಿದ ಹಣದಲ್ಲಿ ಪ್ಲೇವರ್ಸ್ ನಿರ್ಮಾಣ ಮಾಡಲಾಗುವುದು. ವಾರ್ಡಿನ ಆಯ್ದ ಭಾಗಗಳಲ್ಲಿ ರಸ್ತೆ ಅಭಿವೃದ್ಧಿಪಡಿಸುವುದಾಗಿ ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗದ ಇಂಜಿನಿಯರ್ ಹೆಚ್. ವೆಂಕಟೇಶ್ 'ಜನತಾವಾಣಿ'ಗೆ ಮಾಹಿತಿ (2ನೇ ಪುಟಕ್ಕೆ)



17ನೇ ವಾರ್ಡಿನ ಪಿ.ಜೆ. ಬಡಾವಣೆ ವ್ಯಾಪ್ತಿಯಲ್ಲಿ ಅಲ್ಪಸಂಖ್ಯಾತರ ವಿಶೇಷ ಅನುದಾನದಡಿ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಚಾಲನೆ ನೀಡಲಾಯಿತು.

## ದೇಶದಲ್ಲಿ ಮಾಸ್ಕ್ ಧರಿಸುವವರ ಪ್ರಮಾಣ ಕಡಿಮೆ: ಆತಂಕ

ನವದೆಹಲಿ, ಸೆ.10- ಸಾರ್ವಜನಿಕ ಸ್ಥಳಗಳಲ್ಲಿ ಶೇ. 13ರಷ್ಟು ಜನರು ಮಾತ್ರ ಮಾಸ್ಕ್ ಧರಿಸುವುದು ಹಾಗೂ ಶೇ 6ರಷ್ಟು ಜನರು ಮಾತ್ರ ದೈಹಿಕ ಅಂತರ ಪಾಲಿಸುವುದು ಕಂಡು ಬಂದಿರುವುದಾಗಿ ಡಿಜಿಟಲ್ ಸಮುದಾಯ ಆಧಾರಿತ 'ಲೋಕಲ್ ಸರ್ಕಲ್ಸ್' ಸಮೀಕ್ಷೆ ತಿಳಿಸಿದೆ.

ಸಮೀಕ್ಷೆಯಲ್ಲಿ ಶೇ 60ರಷ್ಟು ಪ್ರಮಾಣದಲ್ಲಿ ಪುರುಷರು ಹಾಗೂ ಶೇ 36ರಷ್ಟು ಪ್ರಮಾಣದಲ್ಲಿ ಮಹಿಳೆಯರು (4ನೇ ಪುಟಕ್ಕೆ)

## ನಗರದ ಜನತೆಯಲ್ಲಿ ಜಾಗೃತಿ ಮೂಡಿಸಿದ 'ಕ್ಯಾನ್ಸರ್ ನಡೆ'

ದಾವಣಗೆರೆ, ಅ.10- ಕ್ಯಾನ್ಸರ್ ಬಂದರೆ ಹೆದರುವುದಕ್ಕಿಂತ ಧೈರ್ಯದಿಂದ ಎದುರಿಸಬೇಕು. ವಿಶ್ವಾಸದಿಂದ ಸೂಕ್ತ ಚಿಕಿತ್ಸೆ ತೆಗೆದುಕೊಂಡರೆ ಅದನ್ನು ಮೆಟ್ಟಿ ನಿಲ್ಲ ಬಹುದು. ಪ್ರಾರ್ಥಿಸಿ-ಎದುರಿಸಿ-ಜಯಶೀಲರಾಗಿ ಎಂಬ ಧ್ಯೇಯದೊಂದಿಗೆ ಕ್ಯಾನ್ಸರ್ ನಡೆ -2021 ನಗರದಲ್ಲಿ ಇಂದು ಯಶಸ್ವಿಯಾಗಿ ನಡೆಯಿತು.


ಟಿ.ವಿ.ಸ್ಟೇಷನ್ ಕೆರೆಯ ಆವರಣದಲ್ಲಿ ದಾವಣಗೆರೆ ಕ್ಯಾನ್ಸರ್ ಫೌಂಡೇಷನ್ ಹೈದರಾಬಾದ್‌ನ ಗ್ರೇಸ್ ಫೌಂಡೇಷನ್ ಸಹಯೋಗದೊಂದಿಗೆ ಭಾರತೀಯ ರೆಡ್ ಕ್ರಾಸ್ ಸಂಸ್ಥೆ ಹಾಗೂ ವರದಿಗಾರರ ಕೂಟ ಇವರ ಸಹಕಾರದೊಂದಿಗೆ ಆಯೋಜಿಸಿದ್ದ ಈ ಅಭಿಯಾನವನ್ನು ಮಹಾನಗರ ಪಾಲಿಕೆ ಮೇಯರ್ ಎಸ್.ಟಿ. ವೀರೇಶ್ ಹಾಗೂ ಆಯುಕ್ತ ವಿಶ್ವನಾಥ್ ಮುದಜ್ಜಿ ಜಂಟಿಯಾಗಿ ಜಾಗೃತಿ ಫಲಕಗಳನ್ನು ಅನಾವರಣ ಮಾಡುವ ಮೂಲಕ ಚಾಲನೆ ನೀಡಿದರು.



ದಾವಣಗೆರೆ ಕ್ಯಾನ್ಸರ್ ಫೌಂಡೇಷನ್ ಅಧ್ಯಕ್ಷ ಡಾ. ಶ್ರೀಶೈಲ ಬ್ಯಾಡಗಿ, ಭಾರತೀಯ ರೆಡ್ ಕ್ರಾಸ್ ಸೊಸೈಟಿ, ಸ್ವಯಂಪ್ರೇರಿತ ರಕ್ತದಾನಿಗಳ ಒಕ್ಕೂಟ ಲೈಫ್ ಲೈನ್ ಛೇರ್ಮನ್ ಡಾ.ಎ.ಎಂ. ಶಿವಕುಮಾರ್ ಅವರ ನೇತೃತ್ವದಲ್ಲಿ ಈ ಅಭಿಯಾನ ನಡೆಯಿತು.

ವರದಿಗಾರರ ಕೂಟದ ಕಾರ್ಯದರ್ಶಿ ಮಂಜುನಾಥ್ ಕಾಡಜ್ಜಿ, ಭಾರತೀಯ ವಿಕಾಸ ಪರಿಷತ್ತಿನ ರಾಜ್ಯಾಧ್ಯಕ್ಷ ತಿಪ್ಪೇಸ್ವಾಮಿ, ದಾವಣಗೆರೆ ಘಟಕದ ಅಧ್ಯಕ್ಷ ಜಯರುದ್ರೇಶ್, ದಾವಣಗೆರೆ ರೋಟರಿ ಕ್ಲಬ್ ಅಧ್ಯಕ್ಷ ಆರ್.ಟಿ. ಮೃತ್ಯುಂಜಯ, ಲಯನ್ಸ್ ಕ್ಲಬ್ ಅಧ್ಯಕ್ಷ ಎಸ್. ಓಂಕಾರಪ್ಪ, ಲೈಫ್ ಲೈನ್ ಕಾರ್ಯದರ್ಶಿ ಅನಿಲ್ ಬಾರೆಂಗಳ್ ಅವರೊಂದಿಗೆ ಆಯಾ ಸಂಘಟನೆಗಳ ಸದಸ್ಯರು, ನಗರಪಾಲಿಕೆ ಸದಸ್ಯ ವೀರೇಶ್, ಸಾಮಾಜಿಕ ಕಾರ್ಯಕರ್ತ ಎಂ.ಜಿ. ಶ್ರೀಕಾಂತ್ ಮುಂತಾದವರು ಭಾಗವಹಿಸಿದ್ದರು.

ಇವರೊಟ್ಟಿಗೆ ಸಮಾಜ ಸೇವೆಯಲ್ಲಿ ಆಸಕ್ತರಾದ ವೈದ್ಯರು, ಇಂಜಿನಿಯರ್ ಗಳು, ಉಪನ್ಯಾಸಕರುಗಳು, ವಿದ್ಯಾರ್ಥಿಗಳು, ಉತ್ಸಾಹದಿಂದ ಪಾಲ್ಗೊಂಡಿದ್ದರು. ಕ್ಯಾನ್ಸರ್ ಜಯಿಸಿರುವ ದಾವಣಗೆರೆ ಕ್ಯಾನ್ಸರ್ ಫೌಂಡೇಷನ್ ರಾಯಭಾರಿ ಅರುಣ್ ಕುಮಾರ್ ಆರ್.ಟಿ. ಹಾಗೂ ಇತ್ತೀಚೆಗೆ (4ನೇ ಪುಟಕ್ಕೆ)



# 16 ರಂದು ಹೊನ್ನಾಳಿಯಲ್ಲಿ ಗ್ರಾಮ ವಾಸ್ತವ್ಯಕ್ಕೆ ಸಿಎಂ ಚಾಲನೆ



> ಮುಖ್ಯಮಂತ್ರಿಗಳು ಹಾಗೂ ಸಚಿವರನ್ನು ವಿಶೇಷ ಅಲಂಕೃತ ಚಕ್ಕಡಿಗಳಲ್ಲಿ ಸ್ಥಳೀಯ ಜಾನಪದ ಕಲಾವಿದರು ಹಾಗೂ ವಿವಿಧ ಕಲಾತಂಡಗಳೊಂದಿಗೆ ಆನೆ ಮೆರವಣಿಗೆಯೊಂದಿಗೆ ಸ್ವಾಗತಿಸಲಾಗುವುದು.
>
> \- ಎಂ.ಪಿ. ರೇಣುಕಾಚಾರ್ಯ, ಶಾಸಕರು

ಹೊನ್ನಾಳಿ, ಅ.10- ಕೋವಿಡ್ ಹಿನ್ನೆಲೆಯಲ್ಲಿ ಸ್ಥಗಿತಗೊಂಡಿದ್ದ ಗ್ರಾಮ ವಾಸ್ತವ್ಯವನ್ನು ಮತ್ತೊಮ್ಮೆ ಆರಂಭಿಸಲು ಸರ್ಕಾರ ಚಾಲನೆ ನೀಡುತ್ತಿದ್ದು, ಇದೇ ದಿನಾಂಕ 16 ರಂದು ಹೊನ್ನಾಳಿ ತಾಲ್ಲೂಕಿನ ಕುಂದೂರು ಗ್ರಾಮದಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಚಾಲನೆ ನೀಡಲಿದ್ದಾರೆ ಎಂದು ಮುಖ್ಯಮಂತ್ರಿಗಳ ರಾಜಕೀಯ ಕಾರ್ಯದರ್ಶಿ ಎಂ.ಪಿ. ರೇಣುಕಾಚಾರ್ಯ ತಿಳಿಸಿದ್ದಾರೆ.

ಹೊನ್ನಾಳಿ ತಾಲ್ಲೂಕು ಪಂಚಾಯತಿ ಸಭಾಂಗಣದಲ್ಲಿ ಗ್ರಾಮ ವಾಸ್ತವ್ಯದ ಹಿನ್ನೆಲೆಯಲ್ಲಿ ಏರ್ಪಡಿಸಲಾಗಿದ್ದ ಅಧಿಕಾರಿಗಳ ಸಭೆಯನ್ನುದ್ದೇಶಿಸಿ ಅವರು ಮಾತನಾಡಿದರು.

ಮುಖ್ಯಮಂತ್ರಿಗಳು ಕುಂದೂರು ಗ್ರಾಮದಲ್ಲಿ ಮಧ್ಯಾಹ್ನ 3 ಗಂಟೆಗೆ ಗ್ರಾಮ ವಾಸ್ತವ್ಯಕ್ಕೆ ಚಾಲನೆ ನೀಡಿ ಗ್ರಾಮಸ್ಥರಿಂದ ಅಹವಾಲು ಸ್ವೀಕರಿಸಿ, ರೈತರು, ಕಾರ್ಮಿಕರು, ಮಹಿಳೆಯರಿಗೆ ಹಾಕಿಕೊಂಡಿರುವ ಕಾರ್ಯಕ್ರಮಗಳು ಹಾಗೂ ವಿವಿಧ ಫಲಾನುಭವಿಗಳಿಗೆ ಸವಲತ್ತು ವಿತರಿಸುವ ಕಾರ್ಯಕ್ರಮಕ್ಕೆ ಚಾಲನೆ ನೀಡಿ, ವಿವಿಧ ಇಲಾಖೆಗಳಿಂದ ಏರ್ಪಡಿಸಿರುವ ಮಾಹಿತಿ ಮಳಿಗೆಗಳನ್ನು ಉದ್ಘಾಟಿಸಲಿದ್ದಾರೆ ಎಂದರು.

ಕಂದಾಯ ಸಚಿವ ಆರ್.ಅಶೋಕ್, ಸಂಸದ ಜಿ.ಎಂ.ಸಿದ್ದೇಶ್ವರ ಹಾಗೂ ಜನಪ್ರತಿನಿಧಿಗಳು ಬೆಳಿಗ್ಗೆ 10 ಕ್ಕೆ ಸುರಹೊನ್ನೆ ಗ್ರಾಮಕ್ಕೆ ಭೇಟಿ ನೀಡಿ, ಅಲ್ಲಿ ಗ್ರಾಮಸ್ಥರಿಂದ ಅಹವಾಲುಗಳನ್ನು ಸ್ವೀಕರಿಸಿ, ಸಮಸ್ಯೆಯನ್ನು ಸ್ಥಳದಲ್ಲಿಯೇ ಪರಿಹರಿಸಲಿದ್ದಾರೆ. ನಂತರ ಮಧ್ಯಾಹ್ನ ಮುಖ್ಯಮಂತ್ರಿಗಳೊಂದಿಗೆ ಕುಂದೂರು ಗ್ರಾಮದಲ್ಲಿ ಗ್ರಾಮ ವಾಸ್ತವ್ಯಕ್ಕೆ ಚಾಲನೆ ನೀಡುವ ಕಾರ್ಯಕ್ರಮದಲ್ಲಿ ಭಾಗವಹಿಸಿ ರಾತ್ರಿ ಕಸ್ತೂರಬಾ ವಸತಿ ಶಾಲೆಯಲ್ಲಿ ವಾಸ್ತವ್ಯ ಮಾಡಿ ಅಂದು ರಾತ್ರಿ ನಡೆಯುವ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಭಾಗಿಯಾಗಲಿದ್ದಾರೆ ಎಂದು ತಿಳಿಸಿದರು.

ಜಿಲ್ಲಾಧಿಕಾರಿ ಮಹಾಂತೇಶ ಬೀಳಗಿ ಅವರು ಅಧಿಕಾರಿಗಳನ್ನು ಉದ್ದೇಶಿಸಿ ಮಾತನಾಡಿ, ಸರ್ಕಾರದ ವಿವಿಧ ಇಲಾಖೆಗಳ ಯೋಜನೆಗಳ ಫಲಾನುಭವಿಗಳನ್ನು ಕಾರ್ಯಕ್ರಮದಂದು ಕರೆ ತಂದು ಪುನಃ ಕರೆದುಕೊಂಡು ಹೋಗುವ ಜವಾಬ್ದಾರಿಯನ್ನು ವಹಿಸಿಕೊಳ್ಳಬೇಕು ಎಂದು ಸೂಚಿಸಿದರು.

ಡಿಹೆಚ್‌ಓ ಡಾ.ನಾಗರಾಜ್ ಮಾತನಾಡಿ, ಹೊನ್ನಾಳಿ ಹಾಗೂ ನ್ಯಾಮತಿ ತಾಲ್ಲೂಕು ತಹಶೀಲ್ದಾರ್ ಅವರಿಂದ ಇಲ್ಲಿನ ಗ್ರಾಮಗಳಲ್ಲಿ ಕೋವಿಡ್ ನಿಂದ ಮೃತಪಟ್ಟವರ ಪಟ್ಟಿಯನ್ನು ಸಿದ್ಧಪಡಿಸಿಕೊಂಡಿದ್ದು, ಅವರಿಗೆ ಸರ್ಕಾರದಿಂದ ಸಿಗುವ ಪರಿಹಾರ ನೀಡಲಾಗುವುದು ಎಂದರು.

ಜಿಲ್ಲಾ ಪಂಚಾಯತ್ ಸಿಇಒ ಡಾ.ವಿಜಯ ಮಹಾಂತೇಶ್, ಉಪವಿಭಾಗಾಧಿಕಾರಿ ಮಮತ ಹೊಸಗೌಡರ್, ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಎಂ.ರಾಜೀವ್, ಆಹಾರ ಇಲಾಖೆಯ ಜೆಡಿ ಮಂಟೆಸ್ವಾಮಿ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ವಿಜಯಕುಮಾರ್, ತಾಲ್ಲೂಕು ಪಂಚಾಯತ್ ಕಾರ್ಯನಿರ್ವಹಣಾಧಿಕಾರಿ ರಾಮಭೋವಿ, ಸಿಪಿಐ ನಾಗರಾಜು ಇತರರು ಉಪಸ್ಥಿತರಿದ್ದರು.

# ದಸರಾ ಹಬ್ಬದ ಅಂಗವಾಗಿ ಕೆಲ ರೈಲುಗಳಿಗೆ ಹೆಚ್ಚುವರಿ ಬೋಗಿಗಳು



ಹುಬ್ಬಳ್ಳಿ, ಅ.10- ನೈಋತ್ಯ ರೈಲ್ವೆ ಹುಬ್ಬಳ್ಳಿ ವಲಯ ದಸರಾ ಹಬ್ಬದ ಅಂಗವಾಗಿ ಸಂಚಾರ ನಡೆಸುವ ಜನರ ಅನುಕೂಲಕ್ಕಾಗಿ ಕೆಲವು ರೈಲುಗಳಿಗೆ ಹೆಚ್ಚುವರಿ ಬೋಗಿಗಳನ್ನು ಅಳವಡಿಸಲಿದೆ. ದಸರಾ ಸಂದರ್ಭದಲ್ಲಿ ಹೆಚ್ಚು ಜನರು ಪ್ರಯಾಣ ಮಾಡು ವುದರಿಂದ ಆಗುವ ಜನರ ದಟ್ಟಣೆ ತಪ್ಪಿಸಲು ಹಲವು ರೈಲುಗಳಿಗೆ ಹೆಚ್ಚುವರಿಯಾಗಿ 2 ಬೋಗಿಗಳನ್ನು ಅಳವಡಿಕೆ ಮಾಡಲಾಗಿದೆ ಎಂದು ಪ್ರಕಟಣೆಯಲ್ಲಿ ತಿಳಿಸಿದೆ.

ರೈಲು ಸಂಖ್ಯೆ 06582 ಮೈಸೂರು-ಹುಬ್ಬಳ್ಳಿ, ರೈಲು ಸಂಖ್ಯೆ 06535 ಮೈಸೂರು-ಸೊಲ್ಲಾಪುರ, ರೈಲು ಸಂಖ್ಯೆ 06227 ಮೈಸೂರು-ಶಿವಮೊಗ್ಗ, 06241 ಬೆಂಗಳೂರು-ಹುಬ್ಬಳ್ಳಿ ರೈಲಿಗೆ ಅಕ್ಟೋಬರ್ 13 ಮತ್ತು 14ರಂದು ಹೆಚ್ಚುವರಿ ಬೋಗಿ ಇರಲಿದೆ. ರೈಲು ಸಂಖ್ಯೆ 96581 ಹುಬ್ಬಳ್ಳಿ-ಮೈಸೂರು, ರೈಲು ಸಂಖ್ಯೆ 06242 ಹುಬ್ಬಳ್ಳಿ-ಬೆಂಗಳೂರು ರೈಲಿಗೆ ಅಕ್ಟೋಬರ್ 17ರಂದು ಎರಡು ಹೆಚ್ಚುವರಿ ಬೋಗಿ ಜೋಡಿಸಲಾಗುತ್ತದೆ. ಅಕ್ಟೋಬರ್ 13 ರಿಂದ 16ರ ತನಕ ರೈಲು ಸಂಖ್ಯೆ 06589 ಬೆಂಗಳೂರು - ಮೀರಜ್ ಮತ್ತು ರೈಲು ಸಂಖ್ಯೆ 06549 ಬೆಂಗಳೂರು-ಬೆಳಗಾವಿ ರೈಲಿಗೆ ಹೆಚ್ಚುವರಿ ಬೋಗಿ ಇರಲಿದೆ.

ಅಕ್ಟೋಬರ್ 14 ರಿಂದ 17ರ ತನಕ ರೈಲು ಸಂಖ್ಯೆ 02079 ಬೆಂಗಳೂರು-ಹುಬ್ಬಳ್ಳಿ ಮತ್ತು ರೈಲು ಸಂಖ್ಯೆ 02080 ಹುಬ್ಬಳ್ಳಿ-ಬೆಂಗಳೂರು ರೈಲಿಗೆ ಅಕ್ಟೋಬರ್ 13 ರಿಂದ 17ರ ತನಕ ಹೆಚ್ಚುವರಿ ಬೋಗಿ ಜೋಡಿಸಲಾಗುತ್ತದೆ ಎಂದು ನೈಋತ್ಯ ರೈಲ್ವೆ ಹೇಳಿದೆ.

## 4 ಪಾಸಿಟಿವ್, 5 ಗುಣಮುಖ

ದಾವಣಗೆರೆ, ಅ.10- ಜಿಲ್ಲೆಯಲ್ಲಿ 4 ಜನರಲ್ಲಿ ಕೊರೊನಾ ಸೋಂಕು ದೃಢಪಟ್ಟಿದ್ದು, ಐವರು ಗುಣಮುಖರಾದ ಬಗ್ಗೆ ಜಿಲ್ಲಾಡಳಿತ ಪ್ರಕಟಣೆ ತಿಳಿಸಿದೆ. ದಾವಣಗೆರೆ ತಾಲ್ಲೂಕಿನಲ್ಲಿ 1, ಜಗಳೂರು 1 ಹಾಗೂ ಚನ್ನಗಿರಿ ತಾಲ್ಲೂಕಿನ ಇಬ್ಬರಲ್ಲಿ ಸೋಂಕು ಕಾಣಿಸಿಕೊಂಡಿದೆ. 36 ಸಕ್ರಿಯ ಪ್ರಕರಣಗಳಿವೆ.

# ವಿಜಯನಗರ ನೂತನ ಜಿಲ್ಲೆ ಚನ್ನಬಸವ ಶಿವಯೋಗಿ ಶ್ರೀ ಹರ್ಷ



ಹರಪನಹಳ್ಳಿ, ಅ.10- ಹರಪನಹಳ್ಳಿಗೆ ಬಳ್ಳಾರಿ ದೂರ, ನೂತನ ವಿಜಯನಗರ ಅದಕ್ಕಿಂತ ಸ್ವಲ್ಪ ಹತ್ತಿರ ಹಾಗಾಗಿ ಸ್ವಲ್ಪ ಹರ್ಷಪಡುವಂತಾಗಿದೆ ಎಂದು ನೀಲಗುಂದ ಗುಡ್ಡದ ಜಂಗಮ ಸಂಸ್ಥಾನ ಪೀಠದ ಶ್ರೀ ಚನ್ನಬಸವ ಶಿವಯೋಗಿ ಸ್ವಾಮೀಜಿ ತಿಳಿಸಿದರು.

ಈ ಕುರಿತು ಪ್ರತಿಕ್ರಿಯೆ ನೀಡಿರುವ ಶ್ರೀಗಳು, ಹೊಸ ಕನಸನ್ನು ಹೊತ್ತು ಸಚಿವ ಆನಂದ್‌ಸಿಂಗ್ ಅವರು ನೂತನ ವಿಜಯನಗರ ಜಿಲ್ಲೆಯನ್ನು ಮಾಡಿದ್ದಾರೆ. ಹೀಗಿರುವಾಗ ಆನಂದ್‌ಸಿಂಗ್ ಅವರು ಹರಪನಹಳ್ಳಿ ತಾಲ್ಲೂಕನ್ನು ಕಡೆಗಣಿಸುವುದಿಲ್ಲ ಎನ್ನುವ ಭರವಸೆ ನನಗಿದೆ ಇದೆ ಎಂದು ಶ್ರೀಗಳು ವಿಶ್ವಾಸ ವ್ಯಕ್ತಪಡಿಸಿದರು. ವಿಜಯನಗರ ಜಿಲ್ಲೆಯ ತಾಲ್ಲೂಕುಗಳಲ್ಲಿ ಅತ್ಯಂತ ಹಿಂದುಳಿದ ತಾಲ್ಲೂಕು ಹರಪನಹಳ್ಳಿ. ಇಲ್ಲಿ ನೀರಾವರಿ ಸೌಲಭ್ಯ ಇಲ್ಲ. ಕೇವಲ ಮಳೆ ಆಶ್ರಿತ ಕೃಷಿ ಭೂಮಿ ಹೊಂದಿದ್ದು ಎಸ್ಸಿ, ಎಸ್ಟಿ, ಲಂಬಾಣಿ ತಾಂಡಾಗಳು ಸೇರಿದಂತೆ, ಹಿಂದುಳಿದ ಸಮುದಾಯಗಳು ಹೆಚ್ಚು ಇರುವುದರಿಂದ ಆನಂದ್‌ಸಿಂಗ್ ಹರಪನಹಳ್ಳಿ ತಾಲ್ಲೂಕಿಗೆ ಹೆಚ್ಚು ಒತ್ತು ನೀಡಿ ಅಭಿವೃದ್ಧಿಪಡಿಸುವ ಕುರಿತು ಮನವರಿಕೆ ಮಾಡಬೇಕಿದೆ ಎಂದು ಶ್ರೀಗಳು ಹೇಳಿದರು.

## ಶ್ರೀ ಭದ್ರಕಾಳಮ್ಮ ದೇವಿಗೆ ಕೂಷ್ಮಾಂಡ ದೇವಿ ಅಲಂಕಾರ



ಮಲೇಬೆನ್ನೂರು, ಅ.10- ಪಟ್ಟಣದ ಹೊರ ವಲಯದಲ್ಲಿರುವ ಶ್ರೀ ವೀರಭದ್ರೇಶ್ವರ ದೇವಸ್ಥಾನದಲ್ಲಿರುವ ಶ್ರೀ ಭದ್ರಕಾಳಮ್ಮದೇವಿಗೆ ಶರನ್ನವರಾತ್ರಿ ಪ್ರಯುಕ್ತ ನಾಲ್ಕನೇ ದಿನ ಕೂಷ್ಮಾಂಡ ದೇವಿಯ ವಿಶೇಷ ಅಲಂಕಾರ ಮಾಡಲಾಗಿತ್ತು.

## ಇಂದು ರೈತ ಸಂಘದಿಂದ ಪ್ರತಿಭಟನೆ

ಮೆಕ್ಕೆಜೋಳ ಕನಿಷ್ಠ ಬೆಂಬಲ ಬೆಲೆ 3,500 ಕ್ವಿಂಟಾಲ್‌ಗೆ ನಿಗದಿ ಮಾಡಬೇಕು ಹಾಗೂ ಖರೀದಿ ಕೇಂದ್ರದಲ್ಲಿ ಖರೀದಿಸುವಂತೆ ಆಗ್ರಹಿಸಿ, ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ವತಿಯಿಂದ ಇಂದು ಬೆಳಿಗ್ಗೆ 10.30 ಗಂಟೆಗೆ ಜಯದೇವ ವೃತ್ತದಿಂದ ಜಿಲ್ಲಾಧಿಕಾರಿಗಳ ಕಚೇರಿ ವರೆಗೆ ಪ್ರತಿಭಟನೆ ಹಮ್ಮಿಕೊಳ್ಳಲಾಗಿದೆ ಎಂದು ರಾಜ್ಯಾಧ್ಯಕ್ಷ ಹುಚ್ಚವ್ವನಹಳ್ಳಿ ಮಂಜುನಾಥ್ ತಿಳಿಸಿದ್ದಾರೆ.

# ರಸ್ತೆ ಅಭಿವೃದ್ಧಿ ಕಾಮಗಾರಿಗೆ ಸಂಸದರ ಚಾಲನೆ



22ನೇ ವಾರ್ಡಿನ ಯಲ್ಲಮ್ಮ ನಗರ 7ನೇ ಕ್ರಾಸ್‌ನಿಂದ ಬನ್ನಿ ಮಂಟಪದವರೆಗೆ ಸಿಸಿ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಚಾಲನೆ ನೀಡಲಾಯಿತು.

**(1ನೇ ಪುಟದಿಂದ)** ನೀಡಿದರು.


ಈ ಸಂದರ್ಭದಲ್ಲಿ ಮೇಯರ್ ಎಸ್.ಟಿ. ವೀರೇಶ್, ಮಾಜಿ ಮೇಯರ್ ಸಹ ಆಗಿರುವ ವಾರ್ಡಿನ ಪಾಲಿಕೆ ಸದಸ್ಯ ಬಿ.ಜಿ. ಅಜಯ್ ಕುಮಾರ್, ದೂಡಾ ಅಧ್ಯಕ್ಷ ದೇವರಮನೆ ಶಿವಕುಮಾರ್, ವಿಧಾನಪರಿಷತ್ ಮಾಜಿ ಮುಖ್ಯ ಸಚೇತಕ ಡಾ. ಎ.ಹೆಚ್. ಶಿವಯೋಗಿಸ್ವಾಮಿ, ಬಿಜೆಪಿ ಮುಖಂಡರುಗಳಾದ ಗೋಪಾಲ್ ರಾವ್ ಸಾವಂತ್, ರಾಜು ಅಳಗೋಡಿ, ನಾಗರಾಜ್ ರಾವ್ ಪಿಸಾಳೆ ಮತ್ತು ಇತರರು ಉಪಸ್ಥಿತರಿದ್ದರು.

**22ನೇ ವಾರ್ಡ್ :** ಈ ವಾರ್ಡಿನ ಯಲ್ಲಮ್ಮ ನಗರ 7ನೇ ಕ್ರಾಸ್‌ನಿಂದ ಬನ್ನಿ ಮಂಟಪದವರೆಗೆ ಸಿಸಿ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಸಂಸದ ಜಿ.ಎಂ. ಸಿದ್ದೇಶ್ವರ, ಶಾಸಕ ಎಸ್.ಎ. ರವೀಂದ್ರನಾಥ್ ಸೇರಿದಂತೆ ಇತರರು ಭೂಮಿ ಪೂಜೆ ನೆರವೇರಿಸಿದರು.

ಮಹಾತ್ಮ ಗಾಂಧಿ ನಗರ ವಿಕಾಸ ಯೋಜನೆಯಡಿ 90 ಲಕ್ಷ ವೆಚ್ಚದ ಕಾಮಗಾರಿ ಇದಾಗಿದ್ದು, ಈ ಪೈಕಿ 720 ಮೀಟರ್ ನಷ್ಟು 43.37 ಲಕ್ಷ ರೂ. ವೆಚ್ಚದಲ್ಲಿ ಸಿಸಿ ರಸ್ತೆ, 668 ಮೀಟರ್ ನಷ್ಟು 37.52 ಲಕ್ಷ ವೆಚ್ಚದಲ್ಲಿ ಸಿಸಿ ಡ್ರೈನ್ ನಿರ್ಮಾಣಕ್ಕೆ ಯೋಜನೆ ರೂಪಿಸಲಾಗಿದೆ. ಈ ಕಾಮಗಾರಿಗಾಗಿ ಪಾಲಿಕೆಯಿಂದ ಉದಯ್ ಶಿವಕುಮಾರ್ ಅವರಿಗೆ ಗುತ್ತಿಗೆ ನೀಡಲಾಗಿದೆ ಎಂದು ಪಾಲಿಕೆ ಇಂಜಿನಿಯರ್ ಜಯಲಕ್ಷ್ಮಿ ತಿಳಿಸಿದರು.

ಈ ಸಂದರ್ಭದಲ್ಲಿ ಮೇಯರ್ ಎಸ್.ಟಿ. ವೀರೇಶ್, ಉಪ ಮೇಯರ್ ಶಿಲ್ಪಾ ಜಯಪ್ರಕಾಶ್, ಮಾಜಿ ಮೇಯರ್, ವಾರ್ಡಿನ ಪಾಲಿಕೆ ಸದಸ್ಯ ಬಿ.ಜಿ. ಅಜಯ್‌ಕುಮಾರ್, ವಾರ್ಡಿನ ಪಾಲಿಕೆ ಸದಸ್ಯ ಆರ್. ಶಿವಾನಂದ್, ಪಾಲಿಕೆ ಸದಸ್ಯರುಗಳಾದ ಪ್ರಸನ್ನ ಕುಮಾರ್, ವೀಣಾ ನಂಜಪ್ಪ, ಗೌರಮ್ಮ ಗಿರೀಶ್, ಶಿವನಗೌಡ ಪಾಟೀಲ್, ವೀರೇಶ್ ಪೈಲ್ವಾನ್, ಸ್ಥಾಯಿ ಸಮಿತಿ ಅಧ್ಯಕ್ಷರುಗಳಾದ ಎಲ್.ಡಿ. ಗೋಣೆಪ್ಪ, ರೇಣುಕಾ ಶ್ರೀನಿವಾಸ್, ಪಾಲಿಕೆ ಆಯುಕ್ತ ವಿಶ್ವನಾಥ ಪಿ. ಮುದಜ್ಜಿ, ಅಡಾಣಿ ಸಿದ್ದಪ್ಪ, ಗಾಯತ್ರಮ್ಮ, ಬಿಜೆಪಿ ಮುಖಂಡರುಗಳಾದ ಸಂಗನಗೌಡ್ರು, ಬಿ. ಗುಡ್ಡಪ್ಪ, ಹನುಮಂತರಾವ್ ಸುರ್ವೆ, ಗಣೇಶ್ ರಾವ್, ರುದ್ರೇಶ್, ಕಾಂತೇಶ್, ಸಂಕನಗೌಡ್ರು, ಕೆ. ರಾಜೇಶ್, ತಿಪ್ಪೇಶ್, ಮಂಜುನಾಥ ಸಂಗೀತ್, ಎಂ. ರೂಪ, ಡಿ.ಎಂ. ಕಾಂತರಾಜ್, ಲಕ್ಷ್ಮೀಕಾಂತ್, ರಾಜು ಶಾಮನೂರು, ಅಡಾಣಿ ಸಿದ್ದಣ್ಣ ಸೇರಿದಂತೆ ವಾರ್ಡಿನ ಪ್ರಮುಖರು ಇದ್ದರು.

# ಮನು ಬಳಿಗಾರರ ಬೆಂಬಲ ಕೋರಿದ ಮಾಲಿ ಪಾಟೀಲ



ಬೆಂಗಳೂರು, ಅ.10 - ಕನ್ನಡ ಸಾಹಿತ್ಯ ಪರಿಷತ್ತಿನ ನಿಕಟಪೂರ್ವ ಅಧ್ಯಕ್ಷ ನಾಡೋಜ ಮನು ಬಳಿಗಾರ ಅವರನ್ನು ಭೇಟಿ ಮಾಡಿದ ರಾಜ್ಯ ಕಸಾಪ ರಾಜ್ಯಾಧ್ಯಕ್ಷ ಸ್ಥಾನದ ಅಭ್ಯರ್ಥಿ ಶೇಖರಗೌಡ ಮಾಲಿ ಪಾಟೀಲ ಅವರು ತಮ್ಮನ್ನು ಬೆಂಬಲಿಸಬೇಕೆಂದು ಮನವಿ ಮಾಡಿಕೊಂಡರು. ಭಾನುವಾರ ಗದಗ ಜಿಲ್ಲೆಯ ಬಳಿಗಾರರ ಹುಟ್ಟೂರು ಶಿಗ್ಲಿಯ ಮನೆಯಲ್ಲಿ ಭೇಟಿ ಮಾಡಿದ ಶೇಖರಗೌಡರು, ಚುನಾವಣೆ ಪ್ರಕ್ರಿಯೆ ಕುರಿತು ಚರ್ಚೆ ನಡೆಸಿದರು.

ಈ ಸಂದರ್ಭದಲ್ಲಿ ಗದಗ ಜಿಲ್ಲಾ ನಿಕಟಪೂರ್ವ ಅಧ್ಯಕ್ಷ ಶರಣು ಗೋಗೇರಿ, ಕೊಪ್ಪಳ ಜಿಲ್ಲಾ ನಿಕಟಪೂರ್ವ ಅಧ್ಯಕ್ಷ ರಾಜಶೇಖರ ಅಂಗಡಿ, ಅಂದಾನಪ್ಪ ವಿಭೂತಿ, ಮಹಾಂತೇಶ ನಿಲೋಗಲ್, ನೃಪತುಂಗ ಬಳಿಗಾರ, ಮೈಕೋ ಶಿವಕುಮಾರ್ ಇದ್ದರು.

## ಜಿಲ್ಲಾ ಕ್ರಿಕೆಟ್ ತಂಡದ ಆಯ್ಕೆ

ದಾವಣಗೆರೆ, ಅ. 10- ಕೆ.ಎಸ್.ಸಿ.ಎ. ತುಮಕೂರು ವಲಯ, ದಾವಣಗೆರೆ ಜಿಲ್ಲಾ 16 ವರ್ಷದೊಳಗಿನ ಕ್ರಿಕೆಟ್ ತಂಡದ ಆಯ್ಕೆ ನಾಡಿದ್ದು ದಿನಾಂಕ 12ರ ಮಂಗಳವಾರ ಬೆಳಿಗ್ಗೆ 9 ಗಂಟೆಗೆ ಬಾಪೂಜಿ ಎಂಬಿಎ(ಟರ್ಫ್) ಕ್ರಿಕೆಟ್ ಮೈದಾನದಲ್ಲಿ ನಡೆಯಲಿದೆ ಎಂದು ಕೆ.ಎಸ್.ಸಿ.ಎ ಜಿಲ್ಲಾ ಸಂಚಾಲಕ ಕೆ.ಎನ್. ಗೋಪಾಲಕೃಷ್ಣ (7899610318) ತಿಳಿಸಿದ್ದಾರೆ.

# ಸಂಗೀತಕ್ಕಿದೆ ರೋಗ ಗುಣಪಡಿಸುವ ಶಕ್ತಿ : ಶ್ರೀ ಚನ್ನಬಸವ ಶಿವಯೋಗಿ



**ಹರಪನಹಳ್ಳಿ**

ಹರಪನಹಳ್ಳಿ, ಅ.10- ಸಂಗೀತಕ್ಕೆ ಮಾರು ಹೋಗದವರೇ ಇಲ್ಲ. ಸಂಗೀತಕ್ಕೆ ರೋಗವನ್ನು ಗುಣಪಡಿಸುವ ಶಕ್ತಿ ಇದ್ದು ಮೇಘ ಮಲ್ಹಾರ ಸಂಗೀತ ಹಾಡಿದರೆ ಮಳೆಯೇ ಬರುತ್ತದೆ. ಅಂತಹ ಶಕ್ತಿ ಈ ಸಂಗೀತಕ್ಕೆ ಇದೆ ಎಂದು ನೀಲಗುಂದ ಗುಡ್ಡದ ಸಂಸ್ಥಾನ ಪೀಠದ ಶ್ರೀ ಚನ್ನಬಸವ ಶಿವಯೋಗಿ ಸ್ವಾಮೀಜಿ ಪ್ರತಿಪಾದಿಸಿದರು.

ಪಟ್ಟಣದ ಅಂಬ್ಲಿ ದೊಡ್ಡ ಭರ್ಮಪ್ಪ ಪ್ರಥಮ ದರ್ಜೆ ಮಹಾ ವಿದ್ಯಾಲಯದಲ್ಲಿ ಹಮ್ಮಿಕೊಂಡಿದ್ದ ಸ್ವರ ವೈಭವ ಸಾಂಸ್ಕೃತಿಕ ಎಜುಕೇಷನಲ್ ಚಾರಿಟಬಲ್ ಟ್ರಸ್ಟ್‌ನಿಂದ ಆಯೋಜಿಸಲಾಗಿದ್ದ 'ವಾಯ್ಸ್ ಆಫ್ ಹರಪನಹಳ್ಳಿ' ಜಿಲ್ಲಾ ಮಟ್ಟದ ಗಾಯನ ಸ್ಪರ್ಧೆಯ ಸೆಮಿಫೈನಲ್ ಮತ್ತು ಫೈನಲ್ ಕಾರ್ಯಕ್ರಮದ ದಿವ್ಯಸಾನ್ನಿಧ್ಯ ವಹಿಸಿ ಶ್ರೀಗಳು ಆಶೀರ್ವಚ ನೀಡಿದರು.

ಟಿವಿಗಳಲ್ಲಿ ಮೂಡಿ ಬರುವ ಸಂಗೀತ ಕಾರ್ಯಕ್ರಮಗಳಲ್ಲಿ ಉತ್ತರ ಕರ್ನಾಟಕದ ಪ್ರತಿಭೆಗಳೇ ಹೆಚ್ಚಾಗಿದ್ದು, ಅವರಲ್ಲಿ ಡಾ. ಪಂಡಿತ ಪುಟ್ಟರಾಜ ಗವಾಯಿಗಳು ಹಾಗೂ ಗಾನಯೋಗಿ ಪಂಚಾಕ್ಷರಿ ಗವಾಯಿಗಳ ಶಿಷ್ಯಂದಿರ ಸಂಖ್ಯೆ ಹೆಚ್ಚು ಎಂದರು.

ಕೆಪಿಸಿಸಿ ಮಾಧ್ಯಮ ವಿಶ್ಲೇಷಕರಾದ ಶ್ರೀಮತಿ ಎಂ.ಪಿ.ವೀಣಾ ಮಹಾಂತೇಶ್ ಚರಂತಿಮಠ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿ, ಮಕ್ಕಳಿಗೆ ಸಂಗೀತ ಕಲಿಕೆಗೆ ತಂದೆ, ತಾಯಿ, ಪೋಷಕರು ಹಾಗೂ ಶಿಕ್ಷಕರು ಒತ್ತಡ ಹೇರಬಾರದು. ಯಾವುದೇ ಕಲೆ ಬಲವಂತದಿಂದ ಬರುವಂತಹದ್ದಲ್ಲ. ಅದು ಆಸಕ್ತಿ ಇದ್ದವರಿಗೆ ಮಾತ್ರ ಒಲಿಯುತ್ತದೆ.

ನಮ್ಮ ತಂದೆ ದಿ. ಎಂ.ಪಿ.ಪ್ರಕಾಶ್ ಹಾಗೂ ನನ್ನ ಅಣ್ಣ ದಿ. ಎಂ.ಪಿ.ರವೀಂದ್ರ ಅವರು ಕಲೆ, ಸಾಹಿತ್ಯ, ಸಂಸ್ಕೃತಿಗೆ ಅಪಾರ ಕೊಡುಗೆ ನೀಡಿದ್ದು, ನಮ್ಮ ತಂದೆ ಸಂಗೀತ ಕಲಿಕೆಗೆ ಮನೆಯಲ್ಲಿ ಒಬ್ಬ ಗವಾಯಿಗಳನ್ನು ನೇಮಿಸಿದ್ದರು. ನನಗೆ ಸಂಗೀತ ಕಲಿಯಲು ಆಗಲಿಲ್ಲ, ಲತಕ್ಕ ಹಾಗೂ ಸುಮಕ್ಕ ರಂಗ ಗೀತೆಗಳನ್ನು ಹಾಡುತ್ತಿದ್ದರು. ಅಣ್ಣ ರವೀಂದ್ರ ಅವರು 'ಯಲ್ಲೋ ಜೋಗಪ್ಪ ನಿನ್ನರಮನೆ' ಗೀತೆಯನ್ನು ಅದ್ಭುತವಾಗಿ ಹಾಡುತ್ತಿದ್ದರು ಎಂದು ವೀಣಾ ಹೇಳಿದರು.

ಉಪನ್ಯಾಸಕ ಹೆಚ್.ಮಲ್ಲಿಕಾರ್ಜುನ್ ಮಾತನಾಡಿ, ಗುಡಿಸಲಿನಲ್ಲಿಯೇ ಪ್ರತಿಭೆಗಳು ಅರಳುವುದು. ಅಂತಹ ಪ್ರತಿಭೆಯನ್ನು ಗುರುತಿಸಿ ಪ್ರೋತ್ಸಾಹಿಸಲು 'ವಾಯ್ಸ್ ಆಫ್ ಹರಪನಹಳ್ಳಿ' ಇದೊಂದು ಉತ್ತಮ ವೇದಿಕೆಯಾಗಿದ್ದು, ಇಂತಹ ವೇದಿಕೆಯಲ್ಲಿ ಗೆಲ್ಲುವುದಕ್ಕಿಂತ ಭಾಗವಹಿಸುವಿಕೆ ಮುಖ್ಯ ಎಂದು ಸ್ಪರ್ಧಿಗಳಿಗೆ ಆತ್ಮ ಸ್ಥೈರ್ಯ ತುಂಬಿದರು.

ಆಯೂಷ್ ನೇತ್ರಧಾಮ ಕ್ಲಿನಿಕ್‌ನ ಡಾ.ಸಂಗೀತ ಮಾತನಾಡಿದರು. ಜೀ ಕನ್ನಡದ ಸರಿಗಮಪ ಖ್ಯಾತಿಯ ನವ್ಯ ಆರ್. ಭಟ್, ಹಗರಿಬೊಮ್ಮನಹಳ್ಳಿಯ ಸಂಗೀತ ನಿರ್ದೇಶಕ ಪ್ರದೀಪ್ ಅಕ್ಕಸಾಲಿ, ಸ್ವರ ವೈಭವ ಸಂಗೀತ ಪಾಠ ಶಾಲೆಯ ಸಂಸ್ಥಾಪಕ ಬಸವರಾಜ್ ಭಂಡಾರಿ ತೀರ್ಪುಗಾರರಾಗಿದ್ದರು.

2021-22ನೇ ಸಾಲಿನ 'ವಾಯ್ಸ್ ಆಫ್ ಹರಪನಹಳ್ಳಿ' ಜಿಲ್ಲಾ ಮಟ್ಟದ ಗಾಯನ ಸ್ಪರ್ಧೆಯಲ್ಲಿ ಹಡಗಲಿಯ ಕಿರಣ್‌ಕುಮಾರ್ ಪ್ರಥಮ, ಕಾವ್ಯ ದ್ವಿತೀಯ ಹಾಗೂ ಕೂಡ್ಲಿಗಿಯ ಡಿ. ಅನುಷಾ ಅವರು ತೃತೀಯ ಸ್ಥಾನ ಪಡೆದರು.

ಕರವೇ ತಾಲ್ಲೂಕು ಅಧ್ಯಕ್ಷ ಬಸವರಾಜ್ ಹುಲಿಯಪ್ಪನವರ್, ಪುರಸಭೆ ಮಾಜಿ ಅಧ್ಯಕ್ಷೆ ಕವಿತಾ ವಾಗೀಶ್, ಪ್ರಾಂಶುಪಾಲ ಡಾ. ಹೆಚ್.ಮಲ್ಲಿಕಾರ್ಜುನ್, ಕೋರಿಶೆಟ್ಟಿ ತಿರುಮಲ, ಪ್ರಕಾಶ್, ಎರಡೆತ್ತಿನಹಳ್ಳಿ ಮಂಜುನಾಥ್ ಸೇರಿದಂತೆ ಇತರರು ಉಪಸ್ಥಿತರಿದ್ದರು.


## ಐದನೇ ವರ್ಷದ ಪುಣ್ಯಸ್ಮರಣೆ



**ದಿ|| ಶ್ರೀಮತಿ ಓಬಳಮ್ಮನವರು**

(ದಾವಣಗೆರೆ ಎಪಿಎಂಸಿ ಮಾಜಿ ಅಧ್ಯಕ್ಷರಾದ ದಿ|| ಶ್ಯಾಗಲೆ ಜಿ. ನಾಗಪ್ಪನವರ ಧರ್ಮಪತ್ನಿ)


ಮರಣ : 11-10-2016

*ನೀವು ನಮ್ಮನ್ನಗಲಿ ಇಂದಿಗೆ ಐದು ವರ್ಷಗಳು ಕಳೆದರೂ ನಿಮ್ಮ ನೆನಪು ನಮ್ಮಲ್ಲಿ ಸದಾ ಹಸಿರಾಗಿದೆ. ನಿಮ್ಮ ಮಾರ್ಗದರ್ಶನ ನಮಗೆ ದಾರಿದೀಪವಾಗಿದೆ. ನಿಮ್ಮ ಆತ್ಮಕ್ಕೆ ಶಾಂತಿ ಸಿಗಲೆಂದು ಪ್ರಾರ್ಥಿಸುವ...*

**ಜಿ.ಎನ್. ಶಿವಮೂರ್ತಿ ಮತ್ತು ಸಹೋದರರು, ಸಹೋದರಿಯರು ಸೊಸೆಯಂದಿರು, ಅಳಿಯಂದಿರು, ಮೊಮ್ಮಕ್ಕಳು, ಮರಿಮಕ್ಕಳು ಮತ್ತು ಗುರಪ್ಪರ ವಂಶಸ್ಥರು, ಶ್ಯಾಗಲೆ.**



## ಒಂಭತ್ತನೇ ವರ್ಷದ ಪುಣ್ಯಸ್ಮರಣೆ



ಜನನ : 14.05.1951 ಮರಣ : 11.10.2012

**ದಿ|| ವೇ|| ಮುಕ್ತಿನಾಥ್ ಟಿ.ಹೆಚ್.ಎಂ.,**

ಇವರ ಒಂಭತ್ತನೇ ವರ್ಷದ ಪುಣ್ಯ ಸ್ಮರಣೆ

ನಿಮ್ಮ ಸರಳ ವ್ಯಕ್ತಿತ್ವ, ಸ್ನೇಹಪರತೆ ಹಾಗೂ ಆದರ್ಶ ಜೀವನವೇ ನಮಗೆ ದಾರಿ ದೀವಿಗೆ.

ಪತ್ನಿ : ಶ್ರೀಮತಿ ಸುಧಾ ಟಿ.ಹೆಚ್.ಎಂ., ಮಕ್ಕಳು, ಸೊಸೆಯಂದಿರು, ಅಳಿಯಂದಿರು, ಮೊಮ್ಮಕ್ಕಳು ಹಾಗೂ ಬಂಧು-ಮಿತ್ರರು.

**ಜಯಲಕ್ಷ್ಮಿ ಟ್ರೇಡಿಂಗ್ ಕಾರ್ಪೊರೇಷನ್**

ಕೆ.ಆರ್. ಮಾರ್ಕೆಟ್, ದಾವಣಗೆರೆ.



## ಪ್ರಥಮ ವರ್ಷದ ಪುಣ್ಯಸ್ಮರಣೆ



**ದಿ|| ಕೆ.ಎಂ. ಬೆನಕೇಶ್**

*ದಿನಾಂಕ 11.10.2021ರಂದು ಸೋಮವಾರ ಮಧ್ಯಾಹ್ನ 12 ಗಂಟೆಗೆ*

**ಪ್ರಥಮ ವರ್ಷದ ಪುಣ್ಯಸ್ಮರಣೆಯನ್ನು**

*ನಮ್ಮ ಸ್ವಗೃಹದಲ್ಲಿ ಏರ್ಪಡಿಸಿದ್ದು, ತಾವುಗಳು ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿ ಕೋರಬೇಕಾಗಿ ವಿನಂತಿ.*

*ನೀವು ನಮ್ಮನ್ನಗಲಿ ಇಂದಿಗೆ ಒಂದು ವರ್ಷವಾಯಿತು. ಸದಾ ನಿಮ್ಮ ಸ್ಮರಣೆಯಲ್ಲಿರುವ*

ಇಂತಿ ದುಃಖತಪ್ತ ಕುಟುಂಬ ವರ್ಗ

✦ ಕೆ.ಎಂ. ವಿಶ್ವನಾಥ್ ✦ ಮಮತಾ ವಿಶ್ವನಾಥ್

✦ ಹೆಚ್.ಎಂ. ಬಸಮ್ಮ ✦ ಹೆಚ್. ಎಂ. ಬಸವರಾಜ್

✦ ಹೆಚ್.ಎಂ. ಶಾಂತ ✦ ಹೆಚ್.ಎಂ. ಶ್ರೀಕಂಠಸ್ವಾಮಿ

✦ ವಿನಾಯಕ, ನಿಹಾರಿಕ, ಭಾವನ, ಸ್ಪಂದನ, ಸೂರಜ್


## ನಗರದಲ್ಲಿಂದು ಲೇಡಿಸ್ ಕ್ಲಬ್‌ನಿಂದ ದಾಂಡಿಯಾ ನೃತ್ಯ ಸ್ಪರ್ಧೆ

ಲೇಡಿಸ್ ಕ್ಲಬ್ ವತಿಯಿಂದ ಎಬಿಸಿಡಿ+ ನೃತ್ಯ ಸಂಸ್ಥೆಯ ಇವರ ಸಹಯೋಗದಲ್ಲಿ ದಸರಾ ಹಬ್ಬದ ಪ್ರಯುಕ್ತ ಇಂದು ಸಂಜೆ 5 ಗಂಟೆಗೆ ಕುವೆಂಪು ಕನ್ನಡ ಭವನದಲ್ಲಿ ದಾಂಡಿಯಾ ಧಮಾಲ್ ನೃತ್ಯ ಸ್ಪರ್ಧೆ ನಡೆಯಲಿದೆ.

ಕಾರ್ಯಕ್ರಮಕ್ಕೆ ಮುಖ್ಯ ಅತಿಥಿಗಳಾಗಿ ಶಾಸಕ ಎಸ್.ಎ. ರವೀಂದ್ರನಾಥ್, ಎಸ್.ವಿ. ರಾಮಚಂದ್ರಪ್ಪ, ಸುಮಾ ರೇಣುಕಾಚಾರ್ಯ, ಮಾಜಿ ಮೇಯರ್ ಬಿ.ಜಿ. ಅಜಯ್‌ಕುಮಾರ್ ಪಾಲ್ಗೊಳ್ಳಲಿದ್ದಾರೆ.

ವಿವರಕ್ಕೆ ವಿನೋದ ಶೆಟ್ಟಿ (99455 75594), ಚೇತನ ಶಿವಕುಮಾರ್ (97312 89333), ಪದ್ಮಪ್ರಿಯ (78925 02577), ಲಕ್ಷ್ಮಿ ಸತೀಶ್ (99724 60142) ಅವರುಗಳನ್ನು ಸಂಪರ್ಕಿಸಬಹುದು ಎಂದು ಲೇಡಿಸ್ ಕ್ಲಬ್ ಸಂಸ್ಥಾಪಕರಾದ ಅಮೀರಾಬಾನು ತಿಳಿಸಿದ್ದಾರೆ.

## ನಗರದಲ್ಲಿ ಇಂದು ದಾಂಡಿಯಾ ರಾಸ್

ಬಾತಿ ಇವೆಂಟ್ಸ್ ಮತ್ತು ಕನಸು ನೃತ್ಯ ಅಕಾಡೆಮಿಯ 1ನೇ ವಾರ್ಷಿಕೋತ್ಸವದ ಪ್ರಯುಕ್ತ ದಾಂಡಿಯಾ ರಾಸ್ ಕಾರ್ಯಕ್ರಮವನ್ನು ಇಂದು ಸಂಜೆ 5 ಕ್ಕೆ ಸುಶಿ ಕನ್ವೆಷನ್ ಸೆಂಟರ್ (ಕುಂದು ವಾಡ ಎನ್.ಹೆಚ್.4) ಇಲ್ಲಿ ಹಮ್ಮಿಕೊಳ್ಳಲಾಗಿದೆ.

# ಎಲ್ಲಾ ವಿಜಯಗಳೂ ದಶಮಿಯಂದೇ ಆಗಿವೆ



**ರಾಣೇಬೆನ್ನೂರಿನ ನಾಡಹಬ್ಬದ ಕಾರ್ಯಕ್ರಮದಲ್ಲಿ ಭಾರತೀಯ ಜ್ಯೂನಿಯರ್ ಛೇಂಬರ್ ಅಧ್ಯಕ್ಷ ರವಿ ವಿ. ಪಾಟೀಲ**

ರಾಣೇಬೆನ್ನೂರು, ಅ.10- ನಾಡ ಹಬ್ಬ ವೀರ ಪರಂಪರೆಯ ಸಂಕೇತ, ಇತಿಹಾಸದಲ್ಲಿ ಬರುವ ಎಲ್ಲಾ ವಿಜಯಗಳೂ ಬಹುತೇಕವಾಗಿವಿಜಯದಶಮಿಯಂದೇ ಆಗಿರುವುದು, ಇದಕ್ಕೆ ಪುಷ್ಠಿ ನೀಡುತ್ತದೆ ಎಂದು ಸ್ಥಳೀಯ ಭಾರತೀಯ ಜ್ಯೂನಿಯರ್ ಛೇಂಬರ್ ಅಧ್ಯಕ್ಷ ರವಿ ವಿ. ಪಾಟೀಲ ಹೇಳಿದರು.

ನಗರದ ಕರ್ನಾಟಕ ಸಂಘದ ಆಲೂರು ವೆಂಕಟರಾವ್ ರಂಗಮಂದಿರದಲ್ಲಿ ನಡೆದ 85ನೇ ನಾಡಹಬ್ಬದ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಅವರು ಮಾತನಾಡಿದರು.

ರಾಜ್ಯದಲ್ಲಿ ನಾಡಹಬ್ಬ ನಡೆದು ಬಂದ ಹಾದಿಯನ್ನು ಸವಿಸ್ತಾರವಾಗಿ ವಿವರಿಸಿ, ನಾಡಹಬ್ಬವನ್ನು ನಾಡಿನಲ್ಲಿ ಪ್ರಾರಂಭಿಸಿ ಜಗದ್ವಿಖ್ಯಾತಿಗೊಳಿಸಿದ ಕೀರ್ತಿ ಮೈಸೂರಿನ ಮಹಾರಾಜರಿಗೆ ಸಲ್ಲುತ್ತದೆ. ರಾಣೇಬೆನ್ನೂರಿನ ಕರ್ನಾಟಕ ಸಂಘವೂ ಕೂಡ ಹಲವಾರು ವರ್ಷಗಳಿಂದ ವಿವಿಧ ರಂಗಗಳಲ್ಲಿ ಖ್ಯಾತರಾಗಿರುವ ಸಾಹಿತಿ, ಕಲಾವಿದರನ್ನು ಪರಿಚಯಿಸಿದೆ. ಅಲ್ಲದೇ, ಅನೇಕ ಯುವ ಪ್ರತಿಭೆಗಳನ್ನು ಗುರುತಿಸಿ ಅವರನ್ನು ಸಾರಸ್ವತ ಲೋಕಕ್ಕೆ ಪರಿಚಯಿಸುವ ಅತ್ಯುನ್ನತ ಕಾರ್ಯವನ್ನು ಮಾಡುತ್ತಿದೆ ಎಂದರು.

ಇದೇ ಸಂದರ್ಭದಲ್ಲಿ ರಾಣೇಬೆನ್ನೂರು ತಾಲ್ಲೂಕಿನಾದ್ಯಂತ ಕೊರೊನಾ ವಾರಿಯರ್ ಆಗಿ ಸೇವೆ ಸಲ್ಲಿಸಿದ ಯೋಗ ಶಿಕ್ಷಕಿ ಶ್ರೀಮತಿ ರೇಖಾ ರಾಮಾಳದ ಅವರನ್ನು ಸನ್ಮಾನಿಸಲಾಯಿತು.

ನಂತರ ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯದ ಕು. ಮಹಾಲಕ್ಷ್ಮಿ ಶೆಣೈ ಅವರಿಂದ ನಡೆದ ಹಿಂದೂಸ್ತಾನಿ ಸಂಗೀತ ಕಾರ್ಯಕ್ರಮವು ಜನಮನವನ್ನು ಸೂರೆಗೊಂಡಿತು. ಮಾಲಕೌಂಸ, ಭೂಪ, ಭೈರವಿ ಮೊದಲಾದ ರಾಗಗಳನ್ನು ಹಾಡಿ ಮನರಂಜನೆ ನೀಡಿದರು.

ನಾಡಗೀತೆಯನ್ನು ವಿಜಯಕುಮಾರ್ ಜೋಶಿ ಹಾಡಿ, ಕೆ.ಎನ್. ಷಣ್ಮುಖ ಸ್ವಾಗತಿಸಿ, ಶ್ರೀಪಾದ ಕುಲಕರ್ಣಿ ವಂದಿಸಿದರು. ಕಾರ್ಯಕ್ರಮ ನಿರ್ವಹಣೆಯನ್ನು ಚಿದಂಬರ್ ಜೋಶಿ ನೆರವೇರಿಸಿದರು.

# ಸಮಾಜದಿಂದ ಗಳಿಸಿದ್ದನ್ನು ಸಮಾಜಕ್ಕೆ ಕೊಡುವುದೇ ಖುಷಿ

ದಾವಣಗೆರೆ, ಅ. 10- ಸಮಾಜದಿಂದ ಗಳಿಸಿದ್ದನ್ನು ಸಮಾಜಕ್ಕೆ ಕೊಡುವುದರಲ್ಲಿನ ಖುಷಿ ಬೇರೆ ಎಲ್ಲೂ ಸಿಗುವುದಿಲ್ಲ ಎಂದು ಜಿಲ್ಲಾಧಿಕಾರಿ ಮಹಾಂತೇಶ ಬೀಳಗಿ ಅವರು ಪ್ರತಿಪಾದಿಸಿದರು.

ನಗರದ ಜಿಲ್ಲಾ ಚಿಗಟೇರಿ ಸಾರ್ವಜನಿಕ ಸರ್ಕಾರಿ ಆಸ್ಪತ್ರೆಯಲ್ಲಿ ಗ್ರಾಮೀಣ ಕೂಟ ಮೈಕ್ರೋ ಫೈನಾನ್ಸ್ ಮತ್ತು ಕ್ರೆಡಿಟ್ ಆಕ್ಸೆಸ್ ಇಂಡಿಯಾ ಫೌಂಡೇಶನ್ ತೀವ್ರ ನಿಗಾ ಘಟಕಕ್ಕೆ ಕೊಡ ಮಾಡಿದ ವಿವಿಧ ವೈದ್ಯಕೀಯ ಸಲಕರಣೆಗಳ ದೇಣಿಗೆಯನ್ನು ಸ್ವೀಕರಿಸಿ ಅವರು ಮಾತನಾಡಿದರು.



ಕೋವಿಡ್ ಮೂರನೇ ಅಲೆ ಮಕ್ಕಳ ಮೇಲೆ ಪ್ರಭಾವ ಬೀರುವ ಸಂಭವವಿರುವುದರಿಂದ ಅಗತ್ಯ ರೇಡಿಯೇಟರ್ ಬೆಡ್, ಮಕ್ಕಳ ಐಸಿಯು ಸಿದ್ದತೆ ಮಾಡಿಕೊಳ್ಳಲಾಗುತ್ತಿದೆ. ಈಗಾಗಲೇ ಸಮರ್ಥನಂ ಸಂಸ್ಥೆಯವರು 10 ಐಸಿಯು ಕಾಟ್‌ಗಳನ್ನು ನೀಡಿದ್ದರು. ಸರ್ಕಾರದ ಅನುದಾನದಲ್ಲಿ 10 ಕಾಟ್‌ಗಳನ್ನು ನೀಡಲಾಗಿತ್ತು. ಒಟ್ಟು 38 ಬೆಡ್‌ಗಳನ್ನು ನಿಭಾಯಿಸುವ ಸಾಮರ್ಥ್ಯವಿರುವ 65-66ನೇ ವಾರ್ಡುಗಳು ಈಗಾಗಲೇ ಉದ್ಘಾಟನೆಗೊಂಡಿವೆ. ಇದೇ ವಾರ್ಡ್‌ಗಳಲ್ಲಿ 10 ಕಾಟ್‌ಗಳನ್ನು ಇರಿಸಿ ತಯಾರಿ ಮಾಡಿಕೊಳ್ಳಲಾಗುವುದು ಎಂದು ಅವರು ತಿಳಿಸಿದರು. ಗ್ರಾಮೀಣ ಕೂಟ ಮೈಕ್ರೋ ಫೈನಾನ್ಸ್ ಮತ್ತು ಕ್ರೆಡಿಟ್ ಆಕ್ಸೆಸ್ ಇಂಡಿಯಾ ಫೌಂಡೇಶನ್ 10 ಫೌಲರ್ಸ್ ಕಾಟ್‌ಗಳು, 10 ಸಾಮಾನ್ಯ ಕಾಟ್‌ಗಳು ಹಾಗೂ 4 ಕ್ರಾಶ್ ಕಾಟ್‌ಗಳನ್ನು ನೀಡಿದ್ದು, ಸಂಸ್ಥೆಗೆ ಅವರು ಕೃತಜ್ಞತೆ ಸಲ್ಲಿಸಿದರು.

ಡಿಹೆಚ್‌ಓ ಡಾ.ನಾಗರಾಜ್, ಜಿಲ್ಲಾ ಸರ್ಜನ್ ಡಾ.ಜಯಪ್ರಕಾಶ್, ಆರ್‌ಎಂಒ ಡಾ. ಎಸ್.ಎಸ್. ಕುಲಕರ್ಣಿ, ಡಾ.ಸುಭಾಶ್‌ಚಂದ್ರ. ಸಂಸ್ಥೆಯ ಪ್ರಾದೇಶಿಕ ವ್ಯವಸ್ಥಾಪಕ ಎಂ.ಆರ್. ಸಚಿನ್, ಸಂಸ್ಥೆಯ ಕೇಂದ್ರೀಯ ವ್ಯವಸ್ಥಾಪಕ ಎಸ್. ವೆಂಕಟನಾಯಕ, ಲೀಡ್ ಬ್ಯಾಂಕ್ ಜಿಲ್ಲಾ ವ್ಯವಸ್ಥಾಪಕ ಸುಶ್ರುತ್ ಶಾಸ್ತ್ರಿ ಮತ್ತು ಇತರರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

### ದಾವಣಗೆರೆ ಜಿಲ್ಲೆ ಕೋವಿಡ್ ಸಮಯದಲ್ಲಿ ಅತ್ಯುತ್ತಮ ಕೆಲಸ ಮಾಡಿದೆ

ಸಿ.ಜಿ. ಆಸ್ಪತ್ರೆ ಸಾಮಾನ್ಯ ಆಸ್ಪತ್ರೆಯಲ್ಲ. ದಾವಣಗೆರೆ, ಬಳ್ಳಾರಿ, ಚಿತ್ರದುರ್ಗ, ಹಾವೇರಿ ಹಾಗೂ ಶಿವಮೊಗ್ಗ ಜಿಲ್ಲೆಯಿಂದ ಬರುವ ರೋಗಿಗಳಿಗೆ ಇಲ್ಲಿ ಉತ್ತಮ ಚಿಕಿತ್ಸೆ ನೀಡಲಾಗುತ್ತದೆ. ಉಳಿದ ಜಿಲ್ಲೆಗಳಿಗೆ ಹೋಲಿಸಿದಲ್ಲಿ ದಾವಣಗೆರೆ ಜಿಲ್ಲೆಯು ಕೋವಿಡ್ ಸಮಯದಲ್ಲಿ ಅತ್ಯುತ್ತಮ ಕೆಲಸ ಮಾಡಿ ಅನೇಕ ಜೀವಗಳನ್ನು ಉಳಿಸಿದೆ. ಅಂತಹ ಸಮಯದಲ್ಲಿ ಅನೇಕ ಸಂಘ-ಸಂಸ್ಥೆಯವರು ನೀಡಿರುವ ಸಹಕಾರವನ್ನು ನಾವು ಮರೆಯುವುದಿಲ್ಲ. ಕೋವಿಡ್ ಲಾಕ್‌ಡೌನ್ ಹಾಗೂ ನಂತರದ ಸಮಯದಲ್ಲಿ ಅನೇಕರು ತಮ್ಮ ಕೈಲಾದ ಸಹಾಯವನ್ನು ಮಾಡಿ ದಾವಣಗೆರೆ ದಾನಿಗಳ ಊರು ಎಂಬುದನ್ನು ಮತ್ತೊಮ್ಮೆ ತೋರಿಸಿದ್ದಾರೆ.

-ಮಹಾಂತೇಶ್ ಬೀಳಗಿ, ಜಿಲ್ಲಾಧಿಕಾರಿ

# ಗ್ರಾ.ಪಂ ಒಕ್ಕೂಟ ಇಂದು ರಚನೆ

**ಹೊನ್ನಾಳಿ ತಾಲ್ಲೂಕು**

ಹೊನ್ನಾಳಿ, ಅ.10- ತಾಲ್ಲೂಕಿನ ಗ್ರಾಮ ಪಂಚಾಯ್ತಿ ಒಕ್ಕೂಟ ರಚನೆ ಹಾಗು ಪದಾಧಿಕಾರಿಗಳ ಆಯ್ಕೆಯನ್ನು ನಾಳೆ ದಿನಾಂಕ 11ರ ಸೋಮವಾರ ಮಾಡಲಾಗುವುದು ಎಂದು ಲಿಂಗಾಪುರ ಗ್ರಾಮ ಪಂಚಾಯ್ತಿ ಸದಸ್ಯೆ ಹಾಗೂ ಒಕ್ಕೂಟ ರಚನೆ ಸಂಚಾಲಕರಾದ ರೇಖಾ ಹೇಳಿದರು.

ಹೊನ್ನಾಳಿ ತಾಲ್ಲೂಕಿನ 29 ಗ್ರಾಮ ಪಂಚಾಯ್ತಿಗಳ ಸದಸ್ಯರು ಪೂರ್ವಭಾವಿ ಸಭೆ ಸೇರಿ ಒಕ್ಕೂಟ ರಚನೆ ಮಾಡಲಾಗುವುದು ಎಂದು ಅವರು ಹೇಳಿದರು.

ಸೊರಟೂರು ಗ್ರಾಪಂ ಸದಸ್ಯೆ ಹಾಗೂ ಸಂಚಾಲಕರಾದ ಸುಮ ಮಾತನಾಡಿ, ಒಕ್ಕೂಟದ ರಚನೆಯ ಮುಖ್ಯ ಉದ್ದೇಶ ಪಂಚಾಯ್ತಿ ಅಭಿವೃದ್ಧಿಗೆ ಸಂಬಂಧಿಸಿದ ವಿವಿಧ ಬೇಡಿಕೆಗಳ ಈಡೇರಿಕೆಗಾಗಿ ಸರ್ಕಾರದ ಗಮನಕ್ಕೆ ತರುತ್ತೇವೆ ಎಂದು ಮನವಿ ಮಾಡಿದರು.

ಒಕ್ಕೂಟ ರಚನೆ ಸಲಹೆಗಾರ ಎಂ.ಜೆ. ಯುವರಾಜ, ಯಕ್ಕನಹಳ್ಳಿ ಗ್ರಾಪಂ ಅಧ್ಯಕ್ಷ ದಯಾನಂದ, ಸೊರಟೂರು ಗ್ರಾಪಂ ಅಧ್ಯಕ್ಷೆ ರಾಧಮ್ಮ, ಸದಸ್ಯರಾದ ಬಸವನಗೌಡ ಪಾಟೀಲ್, ಟಿ.ಎಸ್. ಸುಮ, ಕೆಂಚಮ್ಮ ಬೀರಗೊಂಡನಹಳ್ಳಿ, ಸದಸ್ಯರಾದ ಶ್ವೇತಾ, ಶೋಭಾ, ಕವಿತಾ, ಬಿ.ವೈ.ರಾಜು, ಬೇಲಿಮಲ್ಲೂರು ಅಣ್ಣಪ್ಪ, ಕೂಲಂಬಿ ಗ್ರಾಪಂ ಅಧ್ಯಕ್ಷ ಸಿದ್ದೇಶ್, ಉಪಾಧ್ಯಕ್ಷ ಬಸವರಾಜ, ಬನ್ನಿಕೋಡು ಗ್ರಾ.ಪಂ. ಅಧ್ಯಕ್ಷ ಸಿದ್ದೇಶ್, ಹನುಮಸಾಗರದ ಸದಸ್ಯರಾದ ಶೃತಿ, ಗೌರಮ್ಮ, ಪರಶುರಾಮರಾವ್, ನ್ಯಾಮತಿ ತಾಲ್ಲೂಕು ಕೆಂಚಿಕೊಪ್ಪ ಗ್ರಾಪಂನ ವೀರೇಶ್, ಗಿರೀಶ್, ಶಿಲ್ಪಾ, ಕಾವೇರಿ ಭಾಗವಹಿಸಿದ್ದರು.

# ಸ್ಕಂದಾಲಂಕಾರದಲ್ಲಿ ಬನಶಂಕರಿ ಅಮ್ಮ





ದಾವಣಗೆರೆ, ಅ.10- ನಗರದ ಡಿಸಿಎಂ ಟೌನ್‌ಶಿಪ್ ಬಳಿಯ ರಾಜೇಂದ್ರ ಬಡಾವಣೆಯಲ್ಲಿನ ಶ್ರೀ ಬನಶಂಕರಿ ದೇವಾಲಯದಲ್ಲಿ ನವರಾತ್ರಿ ಪ್ರಯುಕ್ತ ಇಂದು ಸ್ಕಂದಾಲಂಕಾರದಲ್ಲಿ ಕಂಗೊಳಿಸುತ್ತಿರುವ ಬನಶಂಕರಿ ಅಮ್ಮ. ದೇವಸ್ಥಾನದಲ್ಲಿನ ಗಾಯತ್ರಿ ಮತ್ತು ಲಕ್ಷ್ಮಿದೇವಿ ಅಮ್ಮನವರಿಗೂ ವಿಶೇಷ ಅಲಂಕಾರ ಮಾಡಲಾಗಿತ್ತು.

# ಮಾಜಿ ಪುರಸಭೆ ಪ್ರೌಢಶಾಲೆಯ ಕಾಂಪೌಂಡ್ ಎತ್ತರಿಸಲು ಪಾಲಿಕೆ ಕ್ರಮ

ದಾವಣಗೆರೆ, ಅ.10- ನಗರದ ಮಾಜಿ ಪುರಸಭೆ ಪ್ರೌಢಶಾಲೆ ಮತ್ತು ಕಾಲೇಜಿಗೆ ಮಹಾನಗರ ಪಾಲಿಕೆ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ ಅಧ್ಯಕ್ಷರಾದ ಶ್ರೀಮತಿ ಉಮಾ ಪ್ರಕಾಶ್ ಮತ್ತು 19ನೇ ವಾರ್ಡಿನ ಪಾಲಿಕೆ ಸದಸ್ಯ ಶಿವಪ್ರಕಾಶ್ ಅವರುಗಳು ವಾರ್ಡಿನ ಇಂಜಿನಿಯರ್ ಸತೀಶ್ ನಾಯಕ್, ಸಹಾಯಕ ಕಾರ್ಯಪಾಲಕ ಅಭಿಯಂತರ ಸಚಿನ್ ಅವರುಗಳೊಂದಿಗೆ ನಿನ್ನೆ ಭೇಟಿ ನೀಡಿ ಸಮಸ್ಯೆಗಳನ್ನು ಆಲಿಸಿದರು.



ಆವರಣದಲ್ಲಿ ಸುತ್ತಾಡಿದ ಉಮಾ ಪ್ರಕಾಶ್ ಮತ್ತು ಶಿವಪ್ರಕಾಶ್ ಅವರುಗಳು ಶಾಲೆಯ ಕೊಠಡಿಗಳು ಶಿಥಿಲಾವಸ್ಥೆಗೆ ತಲುಪಿರುವುದು ಸೇರಿದಂತೆ ಹಲವು ಕುಂದು - ಕೊರತೆಗಳನ್ನು ಗಮನಿಸಿದರು. ಈ ಶಾಲೆಯಲ್ಲಿ ಮಾಜಿ ಮುಖ್ಯಮಂತ್ರಿ ಜೆ.ಹೆಚ್. ಪಟೇಲರು ಸೇರಿದಂತೆ ಅನೇಕ ಹೆಸರಾಂತ ವ್ಯಕ್ತಿಗಳು ವಿದ್ಯಾಭ್ಯಾಸ ಮಾಡಿರುವುದನ್ನು ಕಾಲೇಜಿನ ಪ್ರಾಂಶುಪಾಲರು ತಿಳಿಸಿದರು.

ಸ್ಮಾರ್ಟ್ ಸಿಟಿಯಿಂದ ಕಂಪ್ಯೂಟರ್‌ಗಳನ್ನು ಒದಗಿಸಿದ್ದು, ವಿವಿಧ ಅನುದಾನಗಳಿಂದ ಆವರಣದಲ್ಲಿ ಕೊಠಡಿಗಳ ಕಾಮಗಾರಿ ನಡೆಯುತ್ತಿದ್ದು, ಅದನ್ನು ವೀಕ್ಷಿಸಿದರು. ಈ ಶಾಲೆ ಮತ್ತು ಕಾಲೇಜಿನಲ್ಲಿ ನಗರ ಮತ್ತು ಗ್ರಾಮಾಂತರ ಪ್ರದೇಶದ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಅಲ್ಪಸಂಖ್ಯಾತ ಮತ್ತು ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳು ವಿದ್ಯಾಭ್ಯಾಸ ಮಾಡುತ್ತಿದ್ದು, ಬಡ ಕುಟುಂಬ ವರ್ಗಗಳಿಂದ ಬಂದಿರುತ್ತಾರೆ. ಗುಣಮಟ್ಟದ ವಿದ್ಯಾಭ್ಯಾಸಕ್ಕಾಗಿ ಶಾಲೆಯಲ್ಲಿ ಬೇಕಾದ ಸವಲತ್ತುಗಳ ಬಗ್ಗೆ ಪ್ರಾಚಾರ್ಯ ಸುರೇಶ್ ಕೋರಿಕೊಂಡರು.

ಸುರೇಶ್ ಅವರ ಕೋರಿಕೆಗೆ ಸ್ಪಂದಿಸಿದ ಉಮಾ ಪ್ರಕಾಶ್ ಮತ್ತು ಪಾಲಿಕೆ ಸದಸ್ಯ ಶಿವಪ್ರಕಾಶ್ ಅವರುಗಳು, ಕಾಂಪೌಂಡ್ ಎತ್ತರಿಸಿ, ಕೊಡುವುದಾಗಿ ಹೇಳಿದರು. ಸ್ಥಳದಲ್ಲಿದ್ದ ಇಂಜಿನಿಯರ್‌ಗಳಿಗೆ ಕಾಂಪೌಂಡ್ ನಿರ್ಮಿಸಲು ಬೇಕಾಗುವ ಅಂದಾಜು ವೆಚ್ಚದ ಯೋಜನೆಯನ್ನು ತಯಾರಿಸುವಂತೆ ನಿರ್ದೇಶಿಸಿದರು.

ಅಲ್ಲದೇ ಪ್ರಾಚಾರ್ಯರಿಗೆ ಶಾಲೆಯಲ್ಲಿ ಅಲ್ಪಸಂಖ್ಯಾತ ಮಕ್ಕಳು ಹೆಚ್ಚಾಗಿರುವುದರಿಂದ ಅಲ್ಪಸಂಖ್ಯಾತ ಕಲ್ಯಾಣ ಇಲಾಖೆಯಿಂದಲೂ ಸಹ ಅನುದಾನವನ್ನು ಸರ್ಕಾರದಿಂದ ಕೊಡಿಸುವಂತೆ ಒತ್ತಾಯಿಸಲು ಈ ಭಾಗದ ಶಾಸಕ ಡಾ. ಶಾಮನೂರು ಶಿವಶಂಕರಪ್ಪ ಅವರನ್ನು ಕಂಡು ಮನವಿ ಮಾಡಲು ಸೂಚಿಸಿದರು.

ಈ ಭಾಗದ ಸದಸ್ಯರೊಡಗೂಡಿ ಸಂಸದ ಜಿ.ಎಂ.ಸಿದ್ದೇಶ್ವರ ಅವರನ್ನು ಕಂಡು ಸರ್ಕಾರದಿಂದ ಸಿಗುವ ಸೌಲಭ್ಯಗಳನ್ನು ಒದಗಿಸುವಂತೆ ಕೋರಿಕೊಳ್ಳುವುದಾಗಿ ತಿಳಿಸಿದರು.

*ನವದುರ್ಗೆಯರ 5ನೇ ದಿನ ರೂಪ*

### ಸ್ಕಂದಮಾತಾ ದೇವಿಗೆ ನಮನ

ದುರ್ಗಾದೇವಿಯ ಐದನೆ ರೂಪ
ದುರ್ಗಮ ಭವವ ದಾಟಿಸೊ ರೂಪ
ಭಾರ್ಗವಿಯ ಸ್ಕಂದಮಾತಾ ರೂಪ
ದುರ್ಗೆಯ ವಾತ್ಸಲ್ಯ ತುಂಬಿದ ರೂಪ

ಚತುರ್ಭುಜಗಳಿಂದ ಹೊಳೆವವಳು
ಮಾತೆ ಸ್ಕಂದನ ಕೈಲಿ ಹಿಡಿದಿಹಳು
ಸತ್ವಭರಿತ ಅಭಯ ಹಸ್ತ ತೋರುತ
ಅತಿ ಕೋಮಲ ಕಮಲವ ಹಿಡಿದಿಹಳು

ಸಿಂಹ ವಾಹಿನಿ ಚತುರ್ಭುಜ ದೇವಿಯು
ಸಂಹರಿಸುವ ಮಗನನು ಹೊತ್ತಿಹಳು
ಸಿಂಹದಂಥ ಭವಭಯಗಳ ಕಳೆವಳು
ಸಂಹಾರಕಿ ಶ್ರೇಷ್ಠ ಶಕ್ತಿಯು ಇವಳು

ದಯಾಮಯಿ ಕಣ್ಣಿಂದ ನೋಡಮ್ಮ
ತಾಯಿ ತಿದ್ದಿ ನಮ್ಮ ಮುನ್ನಡೆಸಮ್ಮ
ಭಯಗಳ ಸಂಕೋಲೆ ಬಿಡಿಸಮ್ಮ
ಮಾಯೆಯ ಮುಸುಕು ತೆರೆಸಮ್ಮ

ಒಟ್ಟಿಗೆ ಸ್ಕಂದಗೆ, ದೇವಿಗೆ ಪೂಜಿಸಿ
ಮುಟ್ಟಿ ಹೃಧಯದಿಂದ ಹಾಡುತ್ತ
ಸೊಟ್ಟ ವಾದ ನಮ್ಮ ಸಂರಕ್ಷಿಸು ಎಂದು
ಸಿರಿಹರಿ ತಂಗಿಗೆ ನಮಿಸೋಣ

- ಶ್ರೀ ಕೃಷ್ಣಾರ್ಪಣಮಸ್ತು
ರೂಪಶ್ರೀ ಶಶಿಕಾಂತ್

# ಪ್ರಪಂಚದಲ್ಲಿ ಶಿಕ್ಷಕ ವೃತ್ತಿ ಶ್ರೇಷ್ಠ



**ಪ್ರಾಂಶುಪಾಲ ರುದ್ರಪ್ಪ**

ದಾವಣಗೆರೆ, ಅ.10 - ನಗರದ ಆವರಗೆರೆಯ ಶ್ರೀ ಸಿದ್ದಲಿಂಗೇಶ್ವರ ವಿದ್ಯಾಸಂಸ್ಥೆಯ ಆಶ್ರಯದಲ್ಲಿ ನಡೆಯುತ್ತಿರುವ ಶ್ರೀ ಗುರು ಪಂಚಾಕ್ಷರಿ ಗವಾಯಿ ಮೆಮೋರಿಯಲ್ ಕಾಂಪೋಜಿಟ್ ಶಾಲೆಯಲ್ಲಿ ಶಿಕ್ಷಕರ ದಿನಾಚರಣೆ ಆಚರಿಸಲಾಯಿತು.

ಶಾಲಾಭಿವೃದ್ಧಿ ಮಂಡಳಿಯ ಗೌರವ ಕಾರ್ಯದರ್ಶಿ ಎ.ಹೆಚ್. ಶಿವಮೂರ್ತಿಸ್ವಾಮಿ ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು.

ಮುಖ್ಯ ಅತಿಥಿಯಾಗಿ ಶ್ರೀಮತಿ ಪಾರ್ವತಮ್ಮ ಶಾಮನೂರು ಶಿವಶಂಕರಪ್ಪ ವಿಜ್ಞಾನ ಪದವಿಪೂರ್ವ ಕಾಲೇಜಿನ ಪ್ರಾಂಶುಪಾಲ ರುದ್ರಪ್ಪ ಮಾತನಾಡಿ, ಪ್ರಪಂಚದ ಶ್ರೇಷ್ಠ ವೃತ್ತಿಯಂದರೆ ಅದು ಶಿಕ್ಷಕ ವೃತ್ತಿ. ವಿದ್ಯಾರ್ಥಿಗಳು ಜೀವನದಲ್ಲಿ ಮೊದಲು ತಂದೆ-ತಾಯಿಯ ಮಾತು ಕೇಳಬೇಕು. ನಂತರ ತಮ್ಮ ಶಿಕ್ಷಕರ ಮಾತನ್ನು ಕೇಳಿದರೆ ಮಾತ್ರ ಜೀವನದಲ್ಲಿ ಮುಂದೆ ಬರಲು ಸಾಧ್ಯ ಎಂದರು.

ದೇಶದಲ್ಲಿ ಯಾವುದೇ ಕೆಲಸಕ್ಕೆ ಅರ್ಜಿ ಹಾಕಿದರೆ ರಾಜಕಾರಣಿಗಳು ಶಿಫಾರಸ್ಸು ಮಾಡುತ್ತಾರೆ. ಆದರೆ ಹಲವು ವಿದೇಶಗಳಲ್ಲಿ ತಮಗೆ ಅಕ್ಷರ, ವಿದ್ಯೆ ಕಲಿಸಿದ ಗುರುಗಳ, ಶಿಕ್ಷಕರ ಶಿಫಾರಸ್ಸು ಇದ್ದರೆ ಮಾತ್ರ ಅವರಿಗೆ ಕೆಲಸ ನೀಡಲಾಗುತ್ತದೆ. ಈ ರೀತಿ ಕೆಲ ವಿದೇಶಗಳಲ್ಲಿ ಶಿಕ್ಷಕರಿಗೆ ಗೌರವ ಇದೆ ಎಂದು ತಿಳಿಸಿದರು.

ಮತ್ತೋರ್ವ ಮುಖ್ಯ ಅತಿಥಿಯಾಗಿದ್ದ ಹಿರಿಯ ಪತ್ರಕರ್ತ ಬಕ್ಕೇಶ್ ನಾಗನೂರು ಮಾತನಾಡಿ, ನಾನು ಶಿಕ್ಷಕ ವೃತ್ತಿಯ ಮನೆತನದವನು ಎನ್ನುವುದಕ್ಕೆ ನನಗೆ ತುಂಬಾ ಹೆಮ್ಮೆಯೆನಿಸುತ್ತದೆ. ಕಾರಣ ನಮ್ಮ ತಂದೆಯವರು ಮೋತಿ ವೀರಪ್ಪ ಕಾಲೇಜಿನ ಮುಖ್ಯ ಶಿಕ್ಷಕರಾಗಿದ್ದರು. ಆ ಕಾಲದಲ್ಲಿ ನಮ್ಮ ತಂದೆಯ ಶಿಷ್ಯ ಬಳಗದಲ್ಲಿ ದಾವಣಗೆರೆ ಹಿರೇಮಠದ ಶ್ರೀ ಸದ್ಯೋಜಾತ ಶಿವಾಚಾರ್ಯ ಸ್ವಾಮೀಜಿ, ಶಾಸಕ ಎಸ್.ಎ. ರವೀಂದ್ರನಾಥ್ ಸೇರಿದಂತೆ ಅನೇಕ ಗಣ್ಯರು ತಮ್ಮ ತಂದೆಯ ಶಿಷ್ಯರಾಗಿ ಹೊರಹೊಮ್ಮಿದ್ದಾರೆ. ಆದುದರಿಂದ ಶಿಕ್ಷಕ ವೃತ್ತಿ ತುಂಬಾ ಶ್ರೇಷ್ಠ ಎಂದು ಭಾವಿಸುತ್ತೇನೆ ಎಂದರು.

ಸಂಸ್ಥೆಯ ನಿರ್ದೇಶಕರಾದ ಶ್ರೀಮತಿ ಎ.ಹೆಚ್. ಸುಗ್ಗಲಾದೇವಿ ಮತ್ತಿತರರು ಸಮಾರಂಭದ ವೇದಿಕೆಯಲ್ಲಿ ಉಪಸ್ಥಿತರಿದ್ದರು. ಕು|| ಶ್ರೀದೇವಿ ಕಾರ್ಯಕ್ರಮ ನಿರೂಪಿಸಿದರು. ಕು|| ಕೆ.ಎಸ್. ಬಿಂದು ಸ್ವಾಗತಿಸಿದರು. ಕು|| ಎ. ವಿದ್ಯಾಶ್ರೀ ವಂದಿಸಿದರು.

# ಸತ್ತೂರು ಕೆರೆಗೆ ಶಾಸಕರಿಂದ ಬಾಗಿನ



**ಹರಪನಹಳ್ಳಿ**

ಹರಪನಹಳ್ಳಿ, ಅ.10- ತಾಲ್ಲೂಕಿನ ಸತ್ತೂರು ಗ್ರಾಮದ ಕೆರೆಗೆ ಸ್ಥಳೀಯ ಶಾಸಕ ಜಿ. ಕರುಣಾಕರ ರೆಡ್ಡಿ ಮೊನ್ನೆ ಬಾಗಿನ ಅರ್ಪಿಸಿದರು.

ಬಳಿಕ ಮಾತನಾಡಿದ ಕರುಣಾಕರ ರೆಡ್ಡಿ, ಸತ್ತೂರು ಕೆರೆಯು ವಿಶಾಲ ಭೂ ಪ್ರದೇಶ ಹೊಂದಿದ್ದು, ಕಳೆದ ಏಳು ವರ್ಷಗಳ ಬಳಿಕ ಕೆರೆ ತುಂಬಿ ಕೋಡಿ ಹರಿದಿರುವುದು ಸಂತಸ ತಂದಿದೆ. ಈ ಭಾಗದ ರೈತಾಪಿ ವರ್ಗಕ್ಕೂ ಹಾಗೂ ಜನ, ಜಾನುವಾರುಗಳಿಗೂ ಅನುಕೂಲವಾಗಲಿದೆ ಎಂದರು.

ಈ ವೇಳೆ ಗ್ರಾಮಸ್ಥರು ಶಾಸಕರಿಗೆ ಕೆರೆಗೆ ಸತ್ತೂರಿನಿಂದ ಚೌಡಾಪುರ ಗ್ರಾಮದವರೆಗೆ ತಡೆಗೋಡೆ ನಿರ್ಮಿಸಿಕೊಡುವಂತೆ ಹಾಗೂ ಕೆರೆಕೋಡಿಯಿಂದ ಹಳ್ಳಿಕೆರೆ ಕ್ರಾಸ್ ರಸ್ತೆವರೆಗೆ ಮಿನಿ ಬ್ರಿಡ್ಜ್ ನಿರ್ಮಾಣ ಮಾಡಿಕೊಡುವಂತೆ ಮನವಿ ಮಾಡಿದರು. ಶಾಸಕರ ಜೊತೆಯಲ್ಲಿ ತಾಲ್ಲೂಕು ಬಿಜೆಪಿ ಅಧ್ಯಕ್ಷ ಸತ್ತೂರು ಹಾಲೇಶ್ ಹಾಗೂ ಗ್ರಾಮಸ್ಥರು ಕೆರೆಗೆ ಬಾಗಿನ ಅರ್ಪಿಸಿದರು.

ಈ ಸಂದರ್ಭದಲ್ಲಿ ಮುಖಂಡರಾದ ಪಿ.ಟಿ.ಶಿ ವಾಜಿ ನಾಯ್ಕ್, ನಿಚ್ಚವ್ವನಹಳ್ಳಿ ಭರ್ಮಪ್ಪ, ಹರಿಜನ ಲೋಕಪ್ಪ, ವಿ. ರುದ್ರೇಶ್, ಬಿ. ರಾಜಪ್ಪ, ಯು. ಬಸವಂತ್, ಬೂತ್ ಅಧ್ಯಕ್ಷ ಡಿ. ನಾಗರಾಜ್, ನೇಮಿರಾಜ್ ನಾಯ್ಕ್, ಬಾಲ್ಯಾ ನಾಯ್ಕ್, ಗೊಲ್ಲರಹಟ್ಟಿ ಮಂಜುನಾಥ್, ಹಾಲೇಶ್, ಎಪಿಎಂಸಿ ಮಾಜಿ ಸದಸ್ಯ ಷಣ್ಮುಖಪ್ಪ, ಆರ್.ಆರ್. ಕೆಂಚಪ್ಪ, ಜ್ಯೋತಿ, ಮುಖಂಡರಾದ ಆರ್. ಲೋಕೇಶ್, ತಾ.ಪಂ. ಸದಸ್ಯ ಶಿಂಗ್ರಿಹಳ್ಳಿ ನಾಗರಾಜ್, ಯು.ಪಿ. ನಾಗರಾಜ್, ರಾಘವೇಂದ್ರ ಶೆಟ್ಟಿ, ಸಂತೋಷ್, ಸಿದ್ದೇಶ್ ರೆಡ್ಡಿ ಇನ್ನಿತರರಿದ್ದರು.

# ಮಲೇಬೆನ್ನೂರು: ಇಂದು ರಕ್ತದಾನ ಶಿಬಿರ

ಮಹಮ್ಮದ್ ಪೈಗಂಬರ್ ಜನ್ಮ ದಿನ (ಈದ್ ಮಿಲಾದ್)ದ ಅಂಗವಾಗಿ ಸಮಾಜದ ಯುವಕರು ಆರೋಗ್ಯ ಇಲಾಖೆ ಸಹಯೋಗದಲ್ಲಿ ಇಂದು ಬೆಳಿಗ್ಗೆ 10.30 ರಿಂದ ಸಂಜೆ 5 ರವರೆಗೆ ಸುನ್ನೀ ಜಾಮೀಯಾ ಶಾದಿ ಮಹಲ್‌ನಲ್ಲಿ ರಕ್ತದಾನ ಶಿಬಿರವನ್ನು ಹಮ್ಮಿಕೊಂಡಿದೆ ಎಂದು ಪುರಸಭೆ ಮಾಜಿ ಸದಸ್ಯ ಎ. ಆರೀಫ್ ಅಲಿ ತಿಳಿಸಿದ್ದಾರೆ.

# ನಗರದಲ್ಲಿ ಇಂದು ವಿದ್ಯುತ್ ಇಲ್ಲ

ತರಳಬಾಳು ಬಡಾವಣೆ, ಶಿವಕುಮಾರಸ್ವಾಮಿ ಬಡಾವಣೆ 1 ಮತ್ತು 2ನೇ ಹಂತ, ಸರ್ಕಾರಿ ಐಟಿಐ ಕಾಲೇಜು ಹದಡಿ ರಸ್ತೆ ಹಾಗೂ ಸುತ್ತಮುತ್ತ ಇಂದು ಬೆಳಿಗ್ಗೆ 10 ರಿಂದ ಸಂಜೆ 5ರವರೆಗೆ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ.


## ಬೇಕಾಗಿದ್ದಾರೆ

1) ಶೋ ರೂಂ ಮ್ಯಾನೇಜರ್-01 ಪುರುಷ / ಮಹಿಳೆ (ಯಾವುದೇ ಪದವಿ)
2) ಸೇಲ್ಸ್ ಎಕ್ಸಿಕ್ಯೂಟಿವ್-02 ಶೋ ರೂಂನಲ್ಲಿ ಹುಡುಗರು/ಹುಡುಗಿಯರು (ಪಿಯುಸಿ ಮೇಲ್ಪಟ್ಟು)
3) ಅಟೆಂಡರ್-01 (ಪುರುಷ), ಸಂಪರ್ಕಿಸಿ :

ಲುಕ್ಸ್ ಆಪ್ಟಿಕಲ್ಸ್
98861 70950, 87623 33702


# ರಾಘವೇಂದ್ರ ಕಾಲೇಜಿನಲ್ಲಿ ಅಂಬೇಡ್ಕರ್ ಓದು



ದಾವಣಗೆರೆ, ಅ.10- ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ರಾಘವೇಂದ್ರ ಹೈ-ಟೆಕ್ ಪದವಿ ಪೂರ್ವ ಕಾಲೇಜು ಸಂಯುಕ್ತಾಶ್ರಯದಲ್ಲಿ 75ನೇ ಸ್ವಾತಂತ್ರ್ಯದ ಅಮೃತ ಮಹೋತ್ಸವದ ಪ್ರಯುಕ್ತ ಡಾ. ಬಿ.ಆರ್. ಅಂಬೇಡ್ಕರ್ ಓದು ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು.

ಅಂಬೇಡ್ಕರ್ ಅವರ ಜೀವನದ ಬಗ್ಗೆ ಪ್ರಬಂಧ ಸ್ಪರ್ಧೆಯನ್ನು ಏರ್ಪಡಿಸಲಾಗಿತ್ತು. ಸ್ಪರ್ಧೆಯಲ್ಲಿ ಪಿ. ಎಸ್. ಹೇಮಂತ ಕುಮಾರ್ ಪ್ರಥಮ ಸ್ಥಾನ, ಎ. ವಿಜಯಲಕ್ಷ್ಮಿ ದ್ವಿತೀಯ ಸ್ಥಾನ, ಕೆ.ಆರ್. ವರ್ಷ ತೃತೀಯ ಸ್ಥಾನ ಹಾಗೂ ಎನ್. ಸಂದೇಶ್ ಮತ್ತು ಎಸ್.ಎ. ವರ್ಷ ಸಮಾಧಾನಕರ ಬಹುಮಾನ ಪಡೆದಿದ್ದಾರೆ. ವಿಜೇತ ವಿದ್ಯಾರ್ಥಿಗಳಿಗೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ರವಿಚಂದ್ರ ಪ್ರಶಸ್ತಿ ನೀಡಿದರು.

ಕಾಲೇಜು ಪ್ರಾಚಾರ್ಯ ಡಾ. ಅನಿಲ್ ಕುಮಾರ್ ಶ್ಯಾಗಲೆ ಅಧ್ಯಕ್ಷತೆ ವಹಿಸಿದ್ದರು. ಉಪನ್ಯಾಸಕ ಬಸವರಾಜ್ ಹನುಮಲಿ ಡಾ. ಬಿ.ಆರ್. ಅಂಬೇಡ್ಕರ್ ಜೀವನದ ಮೌಲ್ಯಗಳನ್ನು ತಿಳಿಸಿದರು. ಕನ್ನಡ ಉಪನ್ಯಾಸಕ ಎಂ.ಆರ್. ಹರೀಶ್ ಮತ್ತು ಇತರರು ಉಪಸ್ಥಿತರಿದ್ದರು.

# ಕೋವಿಡ್ ಪರಿಹಾರಕ್ಕಾಗಿ ಅರ್ಜಿ ಆಹ್ವಾನ

ದಾವಣಗೆರೆ, ಅ. 10- ಕೋವಿಡ್-19 ವೈರಾಣು ಸೋಂಕಿನಿಂದಾಗಿ ದುಡಿಯುವ ಸದಸ್ಯರನ್ನು ಕಳೆದುಕೊಂಡಂತಹ ಬಡತನ ರೇಖೆಗಿಂತ ಕೆಳಗಿರುವ ಕುಟುಂಬಕ್ಕೆ ಒಂದು ಲಕ್ಷ ರೂಪಾಯಿ ಪರಿಹಾರ ಮಂಜೂರು ಮಾಡಲು ಅರ್ಜಿಗಳನ್ನು ಪಡೆಯಲು ಸೂಚನೆ ನೀಡಲಾಗಿದೆ.

ಅರ್ಜಿಯನ್ನು ತಾಲ್ಲೂಕು ಕಚೇರಿಯಲ್ಲಿ ಅಥವಾ ತಮ್ಮ ವ್ಯಾಪ್ತಿಯ ನಾಡಕಚೇರಿಯಲ್ಲಿ ನಿಗದಿತ ನಮೂನೆ-1 ಅನ್ನು ಪಡೆದುಕೊಂಡು, ಸೂಕ್ತ ದಾಖಲೆಗಳೊಂದಿಗೆ ಅರ್ಜಿಯನ್ನು ವ್ಯಾಪ್ತಿಯ ನಾಡಕಚೇರಿಯಲ್ಲಿ ಸಲ್ಲಿಸುವಂತೆ ಕೋರಿದೆ.

ಅರ್ಜಿ ಸಲ್ಲಿಸುವವರು ಕೋವಿಡ್-19 ಪಾಸಿಟಿವ್ ಅಥವಾ ನೆಗೆಟಿವ್ ರಿಪೋರ್ಟ್, ರೋಗಿ ಸಂಖ್ಯೆ ಪಿ-ನಂಬರ್, ಕ್ಲಿನಿಕಲ್ ರೇಡಿಯಾಲಜಿ ಮತ್ತು ಪ್ರಯೋಗಾಲಯ ವರದಿ ವೈದ್ಯರಿಂದ ದೃಢೀಕರಿಸಿರಬೇಕು. ಮೃತಪಟ್ಟ ವ್ಯಕ್ತಿಯ ಆಧಾರ್ ಕಾರ್ಡ್, ಮರಣ ಪ್ರಮಾಣ ಪತ್ರ, ಅರ್ಜಿದಾರರ ಪಡಿತರ ಚೀಟಿ, ಆಧಾರ್ ಕಾರ್ಡ್, ಬ್ಯಾಂಕ್ ಪಾಸ್ ಪುಸ್ತಕ, ನಮೂನೆ-2 ರಲ್ಲಿ ಸ್ವಯಂ ಘೋಷಣಾ ಪತ್ರ, ನಮೂನೆ-3 ರಲ್ಲಿ ಕುಟುಂಬ ಸದಸ್ಯರ ನಿರಾಕ್ಷೇಪಣಾ ಪತ್ರ ಸಲ್ಲಿಸಬೇಕೆಂದು ದಾವಣಗೆರೆ ತಾಲ್ಲೂಕು ತಹಶೀಲ್ದಾರ್ ಬಿ.ಎನ್.ಗಿರೀಶ್ ತಿಳಿಸಿದ್ದಾರೆ.



## Shree Sarveshwara Souharda Co-Op. Ltd., Davanagere.

Reg. No. RG0045210000236/17.09.2021
# 1774/19, 1st Floor, 4th cross, LG Complex, Shamanur Road, Siddaveerappa Layout, Opp. :IDFC Bank, Davanagere.
Ph. : 91089 23846, 70199 26156

| | | | |
|---|---|---|---|
| 01) | Manager | 2 Post | Any degree |
| 02) | Accountant | 5 Post | Any degree |
| 03) | Cashier | 2 Post | Any degree |
| 04) | F.D.A. | 3 Post | Any degree |
| 05) | SDA | 2 Post | PUC |
| 06) | Attender | 2 Post | SSLC |
| 07) | Field Officer | 10 Post | Male any degree |
| | | 5 Post | Famale any degree |
| 08) | Pigmy Agent | 20 Post | SSLC |

Interview Date : 10th, 11th, October 2021, Timing 11.00 am


# ಗ್ರಾ.ಪಂ. ಸದಸ್ಯರ ಸಬಲೀಕರಣಕ್ಕೆ ಹೋರಾಟ



**ಹಡಗಲಿಯಲ್ಲಿ ಕೆ.ಸಿ. ಕೊಂಡಯ್ಯ**

ಹೂವಿನಹಡಗಲಿ, ಅ.10- ರಾಜ್ಯದ ಎಲ್ಲಾ ಗ್ರಾಮ ಪಂಚಾಯಿತಿ ಸದಸ್ಯರ ಸಬಲೀಕರಣಕ್ಕಾಗಿ ಹೋರಾಡುವುದಾಗಿ ಮುಂಬರಲಿರುವ ವಿಧಾನಪರಿಷತ್ ಚುನಾವಣಾ ಆಕಾಂಕ್ಷಿ ಕೆ.ಸಿ. ಕೊಂಡಯ್ಯ ಹೇಳಿದರು.

ನಿನ್ನೆ ಇಲ್ಲಿ ಪ್ರವಾಸಿ ಮಂದಿರದಲ್ಲಿ ಮಾಧ್ಯಮ ಗೋಷ್ಠಿಯಲ್ಲಿ ಮಾತನಾಡುತ್ತಿದ್ದರು.

ಅಧಿಕಾರ ವಿಕೇಂದ್ರೀಕರಣ ವ್ಯವಸ್ಥೆ ಜಾರಿಯಾಗಿ ಗ್ರಾಮೀಣ ಸರ್ಕಾರವನ್ನು ಆಡಳಿತಕ್ಕೆ ತಂದರೆ ಹಳ್ಳಿ ಹಳ್ಳಿಗಳ ಅಭಿವೃದ್ಧಿಯಾಗುತ್ತದೆ ಎಂಬ ಕಾರಣದಿಂದ ಗ್ರಾಮ ಪಂಚಾಯ್ತಿಗಳನ್ನು ರಾಜಕೀಯ ಮುಕ್ತಗೊಳಿಸಲಾಗಿದೆ. ಏಕೆಂದರೆ, ಗ್ರಾಮ ಪಂಚಾಯಿತಿ ಚುನಾವಣೆಯಲ್ಲಿ ಯಾವುದೇ ಪಕ್ಷದ ಚಿಹ್ನೆಗಳಿರುವುದಿಲ್ಲ. ಕಾರಣ ರಾಜಕೀಯ ದ್ವೇಷ ಉಂಟಾಗ ಬಾರದೆಂಬ ಹಿನ್ನೆಲೆಯಲ್ಲಿ ಚುನಾವಣಾ ಆಯೋಗ ಕ್ರಮ ವಹಿಸಿದೆ ಎಂದು ತಿಳಿಸಿದರು.

ಪಕ್ಷಾತೀತವಾಗಿ ಗ್ರಾಮ ಪಂಚಾಯಿತಿ ಸದಸ್ಯರೆಲ್ಲರನ್ನು ತಮ್ಮ ಹಕ್ಕು, ಕರ್ತವ್ಯಗಳ ಅಡಿಯಲ್ಲಿ ಸಬಲೀಕರಣಗೊಳಿಸುವ ನಿಟ್ಟಿನಲ್ಲಿ ಹೋರಾಟವನ್ನು ಮಾಡುತ್ತಾ ಬಂದಿದ್ದೇನೆ.

ಆದರೆ ರಾಜ್ಯದಲ್ಲಿ ತಮ್ಮ ಸರ್ಕಾರ ಅಧಿಕಾರದಲ್ಲಿಲ್ಲದ ಕಾರಣ ಕೊಂಚ ವಿಳಂಬವಾಗುತ್ತಿದೆ. ಮುಂಬರುವ ವಿಧಾನಪರಿಷತ್ ಚುನಾವಣೆಯಲ್ಲಿ ಪಕ್ಷಾತೀತ ವಾಗಿ ಬಳ್ಳಾರಿ ಜಿಲ್ಲೆಯ ಸದಸ್ಯ ಮತದಾರರು ಕಳೆದ ಸಲ ನನ್ನನ್ನು ಗೆಲ್ಲಿಸಿದಂತೆ ಈ ಸಾರಿಯೂ ಗೆಲ್ಲಿಸುತ್ತಾರೆಂಬ ವಿಶ್ವಾಸವನ್ನು ಇಟ್ಟುಕೊಂಡು, ಈಗಾಗಲೇ ತಾಲ್ಲೂಕು ಮಟ್ಟದಲ್ಲಿ ಸಮಾಲೋಚನಾ ಸಭೆಗಳನ್ನು ನಡೆಸುತ್ತಿದ್ದೇನೆಂದರು.

ಈ ಸಂದರ್ಭದಲ್ಲಿ ಮಾಜಿ ಶಾಸಕ ನಂದಿಹಳ್ಳಿ ಹಾಲಪ್ಪ, ಶ್ರೀಧರನಾಯ್ಕ ಮತ್ತು ಇತರರು ಹಾಜರಿದ್ದರು.

## ಹೊಳಲ್ಕೆರೆ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರ ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯದಲ್ಲಿ

**ಅಸಲು ದಾವಾ ನಂ. 20/2021**

*ವಾದಿಗಳು:* ಸರೋಜಮ್ಮ ಮತ್ತು ಇತರರು — ವಿರುದ್ಧ — *ಪ್ರತಿವಾದಿಗಳು:* ರಾಜಮ್ಮ ಮತ್ತು ಇನ್ನೊಬ್ಬರು

**ಪ್ರತಿವಾದಿ ನಂ.1/ನೋಟಿಸ್‌ದಾರರು:** ಶ್ರೀಮತಿ ರಾಜಮ್ಮ ಕೋಂ ಗುಡದಪ್ಪ (ನಿವೃತ್ತ ಎ.ಎಸ್.ಐ), ವಯಸ್ಸು ಸುಮಾರು 53 ವರ್ಷ, ಮನೆಗೆಲಸ, ವಾಸ ಜೀನಿಯಸ್ ಶಾಲೆ ಹಿಂಭಾಗ, ಮೈಲಾರಲಿಂಗೇಶ್ವರ ನಿಲಯ, ದಾವಣಗೆರೆ.

***ಸಿ.ಪಿ.ಸಿ. ಆದೇಶ 5 ನಿಯಮ 20ರಡಿಯಲ್ಲಿ 1ನೇ ಪ್ರತಿವಾದಿಯ ವಿರುದ್ಧ ನೀಡಲಾದ ಪತ್ರಿಕಾ ಪ್ರಕಟಣಾ ನೋಟಿಸ್***

ಮೇಲ್ಕಂಡ ದಾವೆಯನ್ನು ವಾದಿಯರು ಪ್ರತಿವಾದಿಯರ ವಿರುದ್ಧ ಪಾಲು ವಿಭಾಗ ಹಾಗೂ ಪ್ರತ್ಯೇಕ ಸ್ವಾಧೀನತೆ ಹಾಗೂ ಇತರೆ ಪರಿಹಾರ ಕೋರಿ ಮಾನ್ಯ ಘನ ನ್ಯಾಯಾಲಯದಲ್ಲಿ ಸಲ್ಲಿಸಿರುತ್ತಾರೆ. ಸದರಿ ಪ್ರಕರಣದಲ್ಲಿ ನೀವು 1ನೇ ಪ್ರತಿವಾದಿಯಾಗಿದ್ದು, ನ್ಯಾಯಾಲಯವು ನಿಮ್ಮ ವಿರುದ್ಧ ನ್ಯಾಯಾಲಯದಿಂದ ಸಮನ್ಸ್, ನೋಂದಾಯಿತ ಅಂಚೆ ಮೂಲಕ ಕಳುಹಿಸಿದ್ದರೂ ಸಹ ಅವು ನಿಮಗೆ ಜಾರಿಯಾಗಿರುವುದಿಲ್ಲ. ಕಾರಣ ನಿಮ್ಮ ಹಾಜರಾತಿಗಾಗಿ ದಿನಾಂಕ : 30.10.2021 ರಂದು ಬೆಳಗ್ಗೆ 11 ಗಂಟೆಗೆ ಮುದ್ದತ್ತು ನಿಗದಿಯಾಗಿದ್ದು, ಆ ದಿನ ನೀವು ಖುದ್ದಾಗಿಯಾಗಲೀ ಅಥವಾ ವಕೀಲರ ಮುಖಾಂತರವಾಗಲೀ ಪ್ರಕರಣದಲ್ಲಿ ಹಾಜರಿದ್ದು, ತಕರಾರು ಇದ್ದಲ್ಲಿ ಸಲ್ಲಿಸತಕ್ಕದ್ದು, ತಪ್ಪಿದ್ದಲ್ಲಿ ನಿಮ್ಮ ವಿರುದ್ಧ ಏಕಪಕ್ಷೀಯ ತೀರ್ಮಾನ ತೆಗೆದುಕೊಳ್ಳಲಾಗುವುದು ತಿಳಿಯಿರಿ.

**ನ್ಯಾಯಾಲಯದ ಮೊಹರು ಹಾಗೂ ಸಹಿಯೊಂದಿಗೆ ದಿನಾಂಕ 27.09.2021ರಂದು ಕೊಡಲ್ಪಟ್ಟಿದೆ.**

ವಾದಿಯರ ಪರ ವಕೀಲರು
**(ಸಿ.ಪಿ. ಅನಿತ)/ ಬಿ.ಎನ್. ಪ್ರಶಾಂತ್**
ವಕೀಲರು, ದಾವಣಗೆರೆ

**ನ್ಯಾಯಾಲದ ಆದೇಶದ ಮೇರೆಗೆ**
**ಶಿರಸ್ತೇದಾರರು**
ಮಾನ್ಯ ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.
ನ್ಯಾಯಾಲಯ ಹೊಳಲ್ಕೆರೆ

## IN THE COURT OF THE HON'BLE II ADDL. CIVIL JUDGE AND J.M.F.C. AT HARIHARA

**O.S No. 124/2018**

**Plaintiff** Suresh M.K. V/s **Defendants** Hanumanthappa & 19 others

**Notice to Defendant No. 18 U/o Rule 20 (1-A) C.P.C.**

**D18 :** Anjinappa S/o Hanumanthappa, Aged about 26 Years, R/o Doggalli Village, Harihara Taluk.

the Plaintiff in the above case has filed the suit against you as Defendant No. 18. Take Notice that you are hereby called upon to apper personally or through an Advocate and say regarding the Suit on 21.10.2021 before this Hon'ble Court at 11 AM. Failing which the case against you will be heard and determined ex-parte

Given under my hand and seal of this Court this the day of 1.10.2021

by order of the Court
Sheristedar,
II add Civil Judge & JMFC, Harihar

**S. PRASANNA KUMAR**
**Advocate for plaintiff**

# ಎಲೆಬೇತೂರಿನಲ್ಲಿ ಕೊರೊನಾ ಲಸಿಕೆ



ದಾವಣಗೆರೆ, ಅ.10- ತಾಲ್ಲೂಕಿನ ಎಲೆಬೇತೂರು ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಆವರಣದಲ್ಲಿ ಮಾಜಿ ಸಚಿವ ಶಾಮನೂರು ಮಲ್ಲಿಕಾರ್ಜುನ್ ಅವರಿಂದ ಗ್ರಾಮೀಣ ಭಾಗದ ಜನರ ಆರೋಗ್ಯದ ಹಿತದೃಷ್ಟಿಯಿಂದ ನಗರಕ್ಕೆ ಸೀಮಿತವಾಗಿದ್ದ ಕೊರೊನಾ ಲಸಿಕೆಯನ್ನು ಗ್ರಾಮೀಣ ಭಾಗಕ್ಕೂ ವಿಸ್ತರಿಸಿದ ಶಾಮನೂರು ಕುಟುಂಬದ ವತಿಯಿಂದ ಗ್ರಾಮದ ಹಾಗೂ ಸುತ್ತಮುತ್ತಲಿನ ಗ್ರಾಮದ ಜನರಿಗೆ ಉಚಿತ ಲಸಿಕೆಯನ್ನು ನೀಡಲಾಯಿತು.

ಈ ಸಂದರ್ಭದಲ್ಲಿ ಜಿ.ಪಂ. ಮಾಜಿ ಸದಸ್ಯ ಬಿ.ಕರಿಬಸಪ್ಪ, ಗ್ರಾ.ಪಂ. ಸದಸ್ಯ ಮರಕುಂಟಿ ಮಂಜುನಾಥ್, ಚೇತನ್‌ಕುಮಾರ್ ಹಂಚಿನಮನಿ, ಗ್ರಾಮದ ಎಂ.ಷಡಕ್ಷರಪ್ಪ, ಎಂ.ಎನ್.ನರೇಂದ್ರ, ಕಲಪನಹಳ್ಳಿ ನಾಗರಾಜ್ ಇತರರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

# ರೋಟರಿ ಕ್ಲಬ್‌ನಿಂದ ರಕ್ತದಾನ ಶಿಬಿರ



ದಾವಣಗೆರೆ, ಅ.10- ರೋಟರಿ ಕ್ಲಬ್ ದಕ್ಷಿಣದ ವತಿಯಿಂದ ನಗರದ ಎಸ್.ಎಸ್ ಬಡಾವಣೆಯ 'ಎ' ಬ್ಲಾಕ್‌ಯ ಪದ್ಮಭೂಷಣ ಶ್ರೀಮತಿ ಗಂಗೂ ಬಾಯಿ ಹಾನಗಲ್ ಉದ್ಯಾನವನದಲ್ಲಿ 'ಮಧುಮೇಹ ಮಣಿಸುವ' ಅಭಿಯಾನದ ಅಡಿಯಲ್ಲಿ 'ಉಚಿತ ರಕ್ತದಲ್ಲಿ ಸಕ್ಕರೆ ಪ್ರಮಾಣ'ದ ಪರೀಕ್ಷೆಯನ್ನು ಹಮ್ಮಿಕೊಳ್ಳಲಾಗಿತ್ತು. ಈ ಸಂದರ್ಭದಲ್ಲಿ ಕ್ಲಬ್‌ನ ಅಧ್ಯಕ್ಷ ಡಾ. ಸುಜಿತ್ ಕುಮಾರ್, ಡಾ. ಹಾಲಸ್ವಾಮಿ ಕಂಬಾಳಿಮಠ, ವಿಶಾಲ್ ಸಂಘವಿ, ವಿಶ್ವಜಿತ್ ಜಾಧವ್, ಮಲ್ಲರಸಾ ಕಾಟ್ವೆ, ಪುಟ್ಟೇಶ್, ಗಜಾನನ ಭೂತೆ ಮತ್ತಿತರರು ಉಪಸ್ಥಿತರಿದ್ದರು.

# ಬಿ.ಕಲಪನಹಳ್ಳಿ : ಫುಡ್‌ಕಿಟ್ ವಿತರಣೆ



ದಾವಣಗೆರೆ, ಅ.10- ಕಟ್ಟಡ ಮತ್ತು ಇತರೆ ಕಾರ್ಮಿಕ ಬಂಧುಗಳಿಗೆ ಆಹಾರ ಪದಾರ್ಥಗಳ ಫುಡ್‌ಕಿಟ್ ವಿತರಣಾ ಕಾರ್ಯಕ್ರಮವನ್ನು ಬಿ. ಕಲಪನಹಳ್ಳಿಯ ಶ್ರೀ ಶರಣ ಬಸವೇಶ್ವರ ಕಲ್ಯಾಣ ಮಂಟಪದಲ್ಲಿ ಕಾಂಗ್ರೆಸ್ ಪಕ್ಷದ ವತಿಯಿಂದ ಆಯೋಜಿಸಲಾಗಿತ್ತು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಕಾಂಗ್ರೆಸ್ ಹಿರಿಯ ಮುಖಂಡರು, ಶಿವಮೊಗ್ಗ ದಾವಣಗೆರೆ ಚಿತ್ರದುರ್ಗ ಹಾಲು ಒಕ್ಕೂಟದ ನಿರ್ದೇಶಕ ಸೋಮಶೇಖರಪ್ಪ ನಾಡಿಗರ್ ಅವರು ವಹಿಸಿದ್ದರು. ಈ ಸಂದರ್ಭದಲ್ಲಿ ಕಾಂಗ್ರೆಸ್ ಪಕ್ಷದ ಹಿರಿಯ ಮುಖಂಡರುಗಳಾದ ಕೆ.ಬಿ. ಬಸವಲಿಂಗಪ್ಪ, ಕೆ.ಜಿ.ಮಹಾದೇವಪ್ಪ, ಕೆ.ಜಿ.ಬಸವನಗೌಡ್ರು, ಡಾ. ಕೆ. ನಾಗಭೂಷಣ್, ಕೆ.ಎನ್.ಬಸವನಗೌಡ್ರು, ಷಡಕಜ್ಜಾರ ಮಂಜಣ್ಣ ಹಾಗೂ ಗ್ರಾಮ ಪಂಚಾಯಿತಿ ಮಾಜಿ ಸದಸ್ಯ ಕೆ.ಸಿ. ನಾಗರಾಜ್, ಗ್ರಾಮ ಪಂಚಾಯ್ತಿ ಮಾಜಿ ಸದಸ್ಯ ಚೇತನ್ ಎಸ್.ನಾಡಿಗರ್, ಸದಸ್ಯರಾದ ಶ್ರೀಮತಿ ಶಾಂತಮ್ಮ ಬಸವನಗೌಡ್ರು, ಜಿಟ್ಟಿನಕಟ್ಟಿ ಬಸವರಾಜ್, ಗ್ರಾಮದ ಮುಖಂಡರಾದ ಭರ್ಮಣ್ಣ, ರಜತ್ ಬಸವನಗೌಡ್ರು ಮತ್ತು ಇತರರು ಉಪಸ್ಥಿತರಿದ್ದರು.

ಕೆ.ಸಿ. ನಾಗರಾಜ್ ಸ್ವಾಗತಿಸಿದರು. ಹೆಚ್.ಮಲ್ಲಿಕಾರ್ಜುನ್ ವಂದಾಲಿ ಸ್ವಾಗತಿಸಿದರು. ಜಯಪ್ಪ ವಂದಿಸಿದರು.


# ಕನ್ನಡ ಚಳುವಳಿಗೆ ಭದ್ರ ಬುನಾದಿ ಹಾಕಿದ್ದ ನೂ.ತಿ. ನಾರಾಯಣರಾವ್

ದಾವಣಗೆರೆಯಲ್ಲಿ ಕನ್ನಡ ಚಳುವಳಿಗೆ ಭದ್ರ ಬುನಾದಿ ಹಾಕಿದ ನೂ.ತಿ.ನಾರಾಯಣ ರಾವ್ ಅವರು ಮರಳಿ ಬಾರದೂರಿಗೆ ತೆರಳಿ ವರ್ಷ. (ನಿಧನ : 7.10.2020) ಅದರೊಂದಿಗೆ ದಾವಣಗೆರೆಯ ಕನ್ನಡ ಪರ ಹೋರಾಟಕ್ಕೆ ಅಪ್ಪರ ಮಟ್ಟಿಗೆ ಶಕ್ತಿ ನಷ್ಟವೂ ಹೌದು.

ಕನ್ನಡ ಚಳುವಳಿ ಮತ್ತು ಸಮಾಜವಾದಿ ಸಿದ್ಧಾಂತಗಳ ಪ್ರಖರ ಹೋರಾಟಗಾರ ನೂಜಾಡಿ ತಿಮ್ಮಯ್ಯ ನಾರಾಯಣ ರಾವ್ ಅರವತ್ತರ ದಶಕದಲ್ಲಿ ಶಾಂತವೇರಿ ಗೋಪಾಲಗೌಡರ ಕಟ್ಟಾ ಅನುಯಾಯಿಯಾಗಿ ಹೋರಾಟಕ್ಕೆ ಧುಮುಕಿದವರು. ಆ ದಿನಗಳಲ್ಲಿ ಜೆ.ಹೆಚ್.ಪಟೇಲರು, ಎಸ್. ಬಂಗಾರಪ್ಪರಂತಹ ಘಟಾನುಘಟಿಗಳೊಂದಿಗೆ ಕೆಲಸ ಮಾಡಿದವರು. ತನ್ನ ಅಚ್ಚುಮೆಚ್ಚಿನ ನಾಯಕ ರಾಮಮನೋಹರ ಲೋಹಿಯಾ ಸಾಗರಕ್ಕೆ ಬಂದು ಹೋರಾಟದಲ್ಲಿ ಭಾಗವಹಿಸಿದಾಗ ತಾವೂ ಶ್ರಮ ವಹಿಸಿ ದುಡಿದು ಧನ್ಯತಾ ಭಾವ ಹೊಂದಿದವರು.

ಆನಂತರದ ದಿನಗಳಲ್ಲಿ ನೂ.ತಿ. ದಾವಣಗೆರೆಯನ್ನು ಕರ್ಮಭೂಮಿಯಾಗಿ ಆರಿಸಿಕೊಂಡರು. ಹೋಟೆಲ್ ಕಾರ್ಮಿಕರನ್ನು ಒಟ್ಟುಗೂಡಿಸಿ, ಅವರಿಗೆ ನ್ಯಾಯವಾಗಿ ಸಲ್ಲಬೇಕಾದ ಸವಲತ್ತುಗಳಿಗಾಗಿ ಹೋರಾಟ ನಡೆಸಿದರು. ಫಲವಾಗಿ ಲಾಕಪ್‌ನಲ್ಲಿ ಪೋಲೀಸರ ಲಾಟಿ ರುಚಿಯನ್ನು ಉಂಡರೂ ಬೇಡಿಕೆ ಈಡೇರುವವರೆಗೂ ನಿರಶನ ನಡೆಸಿ, ಜಯ ಸಾಧಿಸುವವರೆಗೂ ಹಿಂದಡಿಯಿಡಲಿಲ್ಲ.

ಕಟ್ಟಾ ಕನ್ನಡದ ಅಭಿಮಾನಿಯಾಗಿದ್ದ ನಾರಾಯಣ ರಾಯರು ದಾವಣಗೆರೆಯಲ್ಲಿ ಕನ್ನಡ ಚಳು ವಳಿಯನ್ನು ತೀವ್ರಗೊ ಳಿಸುವಲ್ಲಿ ಪೂರ್ಣ ಶಕ್ತಿ ವಿನಿಯೋಗಿಸಿ ದರು. ಅಂದು ಕನ್ನಡ ಪರ ಹೋರಾಟದಲ್ಲಿ ಸಕ್ರಿಯರಾಗಿದ್ದ ಪಿ.ಹಾಲೇಶಪ್ಪ, ಕೆ.ಹೆಚ್.ಸಂಜೀವಪ್ಪ ಅವರುಗಳ ನೇತೃತ್ವದಲ್ಲಿ ನೂ.ತಿ.ನಾರಾಯಣ ರಾವ್ ಮಿತ್ರರಾದ ಬಂಕಾಪುರದ ಚನ್ನಬಸಪ್ಪ, ಡಿ.ದುಗ್ಗಪ್ಪ, ಎ.ಭದ್ರಪ್ಪ, ಬಿ. ಸಂತೋಜಿರಾವ್ ಪವಾರ್ ಮೊದಲಾದವರೊಂದಿಗೆ ಚಳುವ ಳಿಗೆ ಕಾಯಕಲ್ಪ ನೀಡಲು ಮುಂದಾದರು. ಆನಂತರದ ದಿನಗಳಲ್ಲಿ ಯುವ ಮುಂದಾಳುಗಳಾದ ಕೆ.ಜಿ.ಶಿವಕುಮಾರ್, ನಾಗೇಂದ್ರ ಬಂಡೀಕರ್, ಬಸವರಾಜ ಐರಣಿ, ಅಯಾಜ್ ಹುಸೇನ್, ಬಾತಿ ಜಯಣ್ಣ ಮೊದಲಾದ ಅಸಂಖ್ಯಾತರ ಸೇರ್ಪಡೆಯಾಗಿ ಕನ್ನಡದ ಕೆಚ್ಚು ಹೊರ ಹೊಮ್ಮಿತು. ಮಹಾರಾಷ್ಟ್ರದ ಗಡಿ ತಂಟೆಗೆ ಪ್ರತಿಯಾಗಿ ಮರಾಠಿ ಪತ್ರಿಕೆಗಳ ದಹನ, ಲಾರಿ ತಡೆದು ಟೈರ್‌ಗೆ ಬೆಂಕಿ ಹಚ್ಚುವಿಕೆ... ಇತ್ಯಾದಿಗಳಿಂದಾಗಿ ದಾವಣಗೆರೆ ಕನ್ನಡದ ಗಂಡು ಮೆಟ್ಟಿನ ನೆಲ ಎಂಬುದನ್ನು ಮತ್ತೆ ಪ್ರತಿಪಾದಿಸಿತು.



ರಾಜ್ಯಕ್ಕೆ ಕರ್ನಾಟಕ ಎಂದು ನಾಮಕರಣವಾಗಬೇಕೆಂದು ರಾಜ್ಯಾದ್ಯಂತ ಚಳುವಳಿ ತೀವ್ರವಾದಾಗ, ದಾವಣಗೆರೆಯಲ್ಲಿಯೂ ವಿಭಿನ್ನವಾಗಿ, ತೀವ್ರವಾಗಿ ಹೋರಾಟ ನಡೆಸಿದ ನೂ.ತಿ., 1974 ರಂದು ಹೆಸರಿಟ್ಟ ಸಂಭ್ರಮಕ್ಕೆ ಗದುಗಿನ ವೀರನಾರಾಯಣ ದೇಗುಲದಿಂದ ಕನ್ನಡ ಜ್ಯೋತಿಯನ್ನು ಚಳುವಳಿ ಮಿತ್ರರೊಂದಿಗೆ ಸೈಕಲ್ ಮೇಲೆ ತಂದು ವಾರ ಕಾಲ ಅದ್ಧೂರಿ ರಾಜ್ಯೋತ್ಸವ ನಡೆಸಿದ್ದು, ಇಂದು ಇತಿಹಾಸ. ಸುನಂದ ರಂಗ ಮಂಟಪದಲ್ಲಿ ಏಳು ದಿನ ನಡೆದ ಆ ಕಾರ್ಯಕ್ರಮಗಳಲ್ಲಿ ನಾಡಿನ ಹೆಸರಾಂತ ಸಾಹಿತಿಗಳು, ಕಲಾವಿದರು, ಕನ್ನಡ ಪರ ಹೋರಾಟಗಾರರು ಭಾಗವಹಿಸಿ, ನಾಡ ಹಬ್ಬಕ್ಕೊಂದು ಮೆರಗು ನೀಡಿದರು.

ಅಮಾಯಕರ ಮೇಲಿನ ದೌರ್ಜನ್ಯಗಳನ್ನು ವಿರೋಧಿಸಿ, ನ್ಯಾಯಕ್ಕಾಗಿ ಹೋರಾಡುವ ಮಹದುದ್ದೇಶದಿಂದ 'ಸಿದ್ದಗಂಗಾ ಶಿವಣ್ಣ' ಎಂದೇ ಹೆಸರಾದ ಸಿದ್ದಗಂಗಾ ಶಾಲೆಯ ಸ್ಥಾಪಕರೂ, ಪತ್ರಕರ್ತರೂ ಆದ ಎಂ.ಎಸ್.ಶಿವಣ್ಣನವರು ಆರಂಭಿಸಿದ 'ಕರ್ನಾಟಕ ನಾಗರಿಕ ದೌರ್ಜನ್ಯ ವಿರೋಧಿ ಸಮಿತಿ'ಗೆ ಹೆಚ್ಚಿನ ಪುಷ್ಟಿ ತುಂಬಿದ್ದೇ ಈ ನೂ.ತಿ.ನಾ. ಬಹಿರಂಗ ಸಭೆಗಳು, ಪತ್ರಿಕಾಗೋಷ್ಠಿಗಳು, ಧರಣಿ... ಹೀಗೆ ಶಿವಣ್ಣನವರ ಹೆಗಲಿಗೆ ಹೆಗಲು ಕೊಟ್ಟು ದುಡಿದ ನಾರಾಯಣ ರಾವ್, ದಂಡಿನಲ್ಲಿ ಸೋದರ ಮಾವನೇ... ಎಂಬುಕ್ತಿಗೆ ತಕ್ಕಂತೆ ಈ ಹೋರಾಟದಲ್ಲಿ ಎದುರಾದವರು ಎಂತಹ ಪ್ರಬಲರಿರಲಿ ಅಥವಾ ಮಿತ್ರರೇ ಇರಲಿ ಮುಲಾಜಿಲ್ಲದೆ ಮುನ್ನುಗ್ಗುತ್ತಿದ್ದರೆಂಬುದಕ್ಕೆ, ಅವರು ಬಹು ವರ್ಷಗಳ ಮಿತ್ರ ದೌರ್ಜನ್ಯ ನಡೆಸಿದರೆಂದು ಆರೋಪಿಸಿ, ವಿದ್ಯಾರ್ಥಿ ಭವನ ವೃತ್ತದಲ್ಲಿ ಉಪವಾಸ ಕೂತಿದ್ದೂ ಉಂಟು.

ನಾರಾಯಣ ರಾಯರು ಸ್ವಯಂ ರಂಗ ಕಲಾವಿದರು. ತಮ್ಮ ದೈಹಿಕ ನ್ಯೂನತೆಯನ್ನೂ ಮರೆಸುವಂತೆ ಬಣ್ಣ ಹಚ್ಚಿ ಮೆರೆದವರು. 'ವಿಷ ಜ್ವಾಲೆ' ಯಂತಹ ಐತಿಹಾಸಿಕವಲ್ಲದೆ, ಸಾಕಷ್ಟು ಸಾಮಾಜಿಕ ನಾಟಕಗಳಲ್ಲಿಯೂ ಭಾಗಿಯಾದವರು. ಮಕ್ಕಳೆಂದರೆ ಅತೀವ ಪ್ರೀತಿ ತೋರುತ್ತಿದ್ದ ರಾವ್, ಸಿದ್ದಗಂಗಾ ಶಾಲೆಯ 'ಅನಧಿಕೃತ' ಕಲಾ ನಿರ್ದೇಶಕ. ಬಹುತೇಕ ಕಾರ್ಯಕ್ರಮಗಳಲ್ಲಿ ಅವರದೇ ಮಾರ್ಗದರ್ಶನ.

ವೈಯಕ್ತಿಕವಾಗಿ ನನಗೆ ರಾಯರು ಐದು ದಶಕಗಳ ಮಿತ್ರರು. ಆ ದಿನಗಳಲ್ಲಿ ಬಹು ಪ್ರಬಲವಾಗಿದ್ದ ನಮ್ಮ ಮಿತ್ರ ಮಂಡಳಿಯ 'ಆಡಳಿತ ಮಂಡಳಿ' ಗೆ ರಾಯರೇ ದಂಡ ನಾಯಕರು ! ವಿದ್ಯಾರ್ಥಿ ಭವನ ವೃತ್ತದ ಬಳಿ ನಾನಿದ್ದ ರೂಮಿನ ಮೇಲ್ಭಾಗದ ರೂಮಿನಲ್ಲಿಯೇ ರಾಯರ ವಾಸ. ಪತ್ರಿಕೋದ್ಯಮದಲ್ಲಿದ್ದ ನನಗೆ ಕೆಲ ದುರ್ಭರ ಸಂದರ್ಭದಲ್ಲಿ ಸದಾಕಾಲ ಬೆಂಗಾವಲಾಗಿದ್ದವರೇ ಅವರು !!

ನಾರಾಯಣ ರಾಯರ ವಿಶೇಷತೆಯೆಂದರೆ, ಶಾಂತವೇರಿ ಗೋಪಾಲಗೌಡರ ಪ್ರಬಲ ಪ್ರತಿಪಾದಕರಾಗಿದ್ದ ಅವರು, ತಮ್ಮ ನಡೆ - ನುಡಿಯಲ್ಲಿಯೂ ಅದನ್ನೇ ಪಾಲನೆ ಮಾಡಿದ್ದು, ಶಕ್ತಿ ಇರುವವರೆಗೂ ಹಾಲು ಮಾರಿ ಜೀವಿಸಿದರೇ ವಿನಃ ಸಾರ್ವಜನಿಕ ಹಣದ ಪೈಸೆಯನ್ನೂ ಸ್ವಂತಕ್ಕೆ ಬಳಸಿಕೊಳ್ಳದ ತೀರಾ ಅಂದ್ರೆ ತೀರಾ ಪ್ರಾಮಾಣಿಕ. ಹೀಗಾಗಿ ಅವರು ಕಡೆ ಗಳಿಗೆಯವರೆಗೂ ವಾಸ ಮಾಡಿದ್ದು ಕಿರಿದಾದ ಬಾಡಿಗೆ ಮನೆಯಲ್ಲಿಯೇ ! ಶಿಕ್ಷಕಿ ಪತ್ನಿ ಶ್ರೀಮತಿ ಶಾಂತ, ಮಗ - ಮಗಳೊಂದಿಗೆ ಚಿಕ್ಕ - ಚೊಕ್ಕ ಸಂಸಾರ ನಡೆಸಿದ ರಾಯರು, ತಮ್ಮ ಬದುಕಿನ ಏಳೂವರೆ ದಶಕಗಳ ಕಾಲದಲ್ಲಿ ಭೇಟಿಯಾದಾಗಲೆಲ್ಲಾ ಲೋಹಿಯಾ, ಕನ್ನಡ... ಇತ್ಯಾದಿಗಳ ಮಾತುಗಳೇ ವಿನಃ ತಪ್ಪಿಯೂ ಹಣ, ಆಸ್ತಿ, ಮನೆ ಇತ್ಯಾದಿ ವೈಭೋಗಗಳ ವಿಚಾರ ಛೇ ! ಅವರ ಮನದೇವರಾಣೆ !!. ಸಾಧ್ಯವೇ ಇಲ್ಲ. ತಮ್ಮ ತತ್ವಗಳಿಗೆಷ್ಟರ ಮಟ್ಟಿಗೆ ರಾಯರು ಬದ್ಧರಾಗಿದ್ದರೆಂದರೆ ಮಗಳಿಗೆ ಕನ್ನಡ ತಾಯಿ ರಾಜರಾಜೇಶ್ವರಿಯ ಹೆಸರಿಟ್ಟರೆ, ಮಗ ರಾಮ ಮನೋಹರ !

ನೂ.ತಿ.ನಾರಾಯಣ ರಾವ್‌ರ ನೆನಪುಗಳು ಬಗೆದಷ್ಟೂ ಸಿಗುತ್ತಲೇ ಹೋಗುತ್ತವೆ. ದಾವಣಗೆರೆ ಒಬ್ಬ ಅಪರೂಪದ ಮೇಧಾವಿ, ಕಳಂಕ ರಹಿತ ಜನ ನಾಯಕನನ್ನು ಕಳೆದುಕೊಂಡಿತು ಎಂಬುದು ನಿಜ.

ನೂ.ತಿ. ನಾರಾಯಣ ರಾವ್ ಸದಾ ಸ್ಮರಣೆಯಲ್ಲಿರುತ್ತಾರೆ.

**- ಹಳೇಬೀಡು ರಾಮ ಪ್ರಸಾದ್,** ದಾವಣಗೆರೆ.

# 'ಮಿಸೆಸ್ ಇಂಡಿಯಾ' ಕಿರೀಟ ಧರಿಸಿದ ರಶ್ಮಿ



**(1ನೇ ಪುಟದಿಂದ)** ನಾಗರಾಜ್ ಅವರು ತಿಳಿಸಿದರು.

ಬೆಂಗಳೂರಿನಿಂದ ಆಗಮಿಸಿದ್ದ ತಂಡವು ಜೈಪುರದಲ್ಲಿ ಒಟ್ಟು ನಾಲ್ಕು ಪ್ರಶಸ್ತಿಗಳನ್ನು ಗೆದ್ದುಕೊಂಡಿದೆ. ಈ ತಂಡ ಬರುವ ವರ್ಷ 2022ರ ಏಪ್ರಿಲ್‌ನಲ್ಲಿ ಸಿಂಗಪುರದಲ್ಲಿ ನಡೆಯುವ ಅಂತರರಾಷ್ಟ್ರೀಯ ಮಟ್ಟದ ಸ್ಪರ್ಧೆಗೆ ಆಯ್ಕೆಯಾಗುವುದರ ಮೂಲಕ ಭಾರತವನ್ನು ಪ್ರತಿನಿಧಿಸಲಿದೆ.

**ರಶ್ಮಿ ರಂಗಪ್ಪ :** ಐ ಆಮ್ ಪವರ್‌ಫುಲ್ ವರ್ಲ್ಡ್ ವಿಭಾಗದಲ್ಲಿ ಕಿರೀಟ ಧರಿಸಿರುವ ರಶ್ಮಿ ಅವರು ಜಗಳೂರು ತಾಲ್ಲೂಕಿನ ಬಿಳಿಚೋಡು ಗ್ರಾಮದವರಾದ ಪೊಲೀಸ್ ಡಿವೈಎಸ್ಪಿ ಟಿ. ರಂಗಪ್ಪ ಅವರ ಧರ್ಮಪತ್ನಿ. ರಂಗಪ್ಪ ಅವರೀಗ ದೊಡ್ಡಬಳ್ಳಾಪುರ ನಗರ ಪೊಲೀಸ್ ಉಪಾಧೀಕ್ಷಕರಾಗಿದ್ದು, ಅವರ ಪತ್ನಿ ರಶ್ಮಿ ಮೂಲತಃ ಶಿವನಿಯವರಾಗಿದ್ದಾರೆ.

ರಶ್ಮಿ ರಂಗಪ್ಪ ಅವರನ್ನು ದಾವಣಗೆರೆ ಮಹಾನಗರ ಪಾಲಿಕೆ ಮಾಜಿ ಮಹಾಪೌರರಾದ ಶ್ರೀಮತಿ ರೇಖಾ ನಾಗರಾಜ್ ಮತ್ತು ಪಾಲಿಕೆ ವಿರೋಧ ಪಕ್ಷದ ನಾಯಕ ಎ.ನಾಗರಾಜ್ ದಂಪತಿ ಅಭಿನಂದಿಸಿದ್ದಾರೆ.

# ದೇಶದಲ್ಲಿ ಮಾಸ್ಕ್ ಧರಿಸುವವರ ಪ್ರಮಾಣ ಕಡಿಮೆ

**(1ನೇ ಪುಟದಿಂದ)** ಭಾಗವಹಿಸಿದ್ದರು. ದೇಶದ 366 ಜಿಲ್ಲೆಗಳ ಒಟ್ಟು 65 ಸಾವಿರ ನಾಗರಿಕರಿಂದ ಸಮೀಕ್ಷೆಗಾಗಿ ಪ್ರತಿಕ್ರಿಯೆ ಸಂಗ್ರಹಿಸಲಾಗಿತ್ತು.

ನಗರ, ಜಿಲ್ಲೆಗಳಲ್ಲಿ ಬಸ್ಸು, ರೈಲು, ವಿಮಾನ ಪ್ರಯಾಣದ ವೇಳೆ ಸಾರ್ವಜನಿಕರು ಕೋವಿಡ್ ಮಾರ್ಗಸೂಚಿಗಳನ್ನು ಹೇಗೆ ಪಾಲಿಸುತ್ತಿದ್ದಾರೆ ಎನ್ನುವ ಕುರಿತು ಸಮೀಕ್ಷೆಯಲ್ಲಿ ಅಧ್ಯಯನ ನಡೆಸಲಾಗಿದೆ.

ಇದೇ ವರ್ಷ ಜೂನ್‌ನಲ್ಲೂ ಇದೇ ಸಂಸ್ಥೆ ನಡೆಸಿದ ಸಮೀಕ್ಷೆಯಲ್ಲಿ ೃ ಶೇ.29ರಷ್ಟು ಮಂದಿ ಮಾಸ್ಕ್ ಧರಿಸುವುದು ಹಾಗೂ ಶೇ 11ರಷ್ಟು ಜನರು ದೈಹಿಕ ಅಂತರ ಪಾಲಿಸುವುದು ಕಂಡುಬಂದಿತ್ತು. ಈ ಬಾರಿಯ ಸಮೀಕ್ಷೆಯಲ್ಲಿ ಮಾಸ್ಕ್ ಧರಿಸುವಿಕೆ ಶೇ 29ರಿಂದ 13ಕ್ಕೆ ಹಾಗೂ ದೈಹಿಕ ಅಂತರ ಪಾಲಿಸುವಿಕೆಯು ಶೇ 11ರಿಂದ 6ಕ್ಕೆ ಇಳಿದಿದೆ.

ಜೊತೆಗೆ ಈ ವರ್ಷದ ಫೆಬ್ರುವರಿ ಮತ್ತು ಮಾರ್ಚ್‌ನಲ್ಲಿ ಸಮೀಕ್ಷೆಯಲ್ಲಿ ವರದಿಯಾದ ಪ್ರಮಾಣಕ್ಕಿಂತಲೂ ಈ ಬಾರಿ ಹೆಚ್ಚಿನ ಸಂಖ್ಯೆಯಲ್ಲಿ ಪ್ರವಾಸ ಕೈಗೊಳ್ಳುತ್ತಿದ್ದಾರೆ ಎಂದು 'ಲೋಕಲ್ ಸರ್ಕಲ್ಸ್'ನ ಸಂಸ್ಥಾಪಕ ಸಚಿನ್ ಥಾಪರಿಯಾ ಹೇಳಿದ್ದಾರೆ.

# ಸಂಕಲ್ಪದ ಆಚರಣೆಯೇ ನವರಾತ್ರಿ

**(1ನೇ ಪುಟದಿಂದ)** ಎಂ.ಪಿ. ರೇಣುಕಾಚಾರ್ಯ ಮಾತನಾಡಿ, ನಾವೆಲ್ಲರೂ ಧರ್ಮದ ತಳಹದಿಯ ಮೇಲೆ ಜೀವನವನ್ನು ರೂಪಿಸಿಕೊಳ್ಳಬೇಕು. ಸಾಮಾಜಿಕ ಪ್ರಜ್ಞೆ ಮೂಡಿಸುವ ಕೆಲಸವನ್ನು ಮಠಾಧೀಶರು ಮಾಡಬೇಕು ಎಂದು ಹೇಳಿದರು.

ಬಿ.ಎಸ್. ಯಡಿಯೂರಪ್ಪ ಅವರು ಮುಖ್ಯಮಂತ್ರಿಗಳಾಗಿದ್ದ ವೇಳೆ ಹೊನ್ನಾಳಿ ವಿಧಾನಸಭಾ ಕ್ಷೇತ್ರಕ್ಕೆ ಸಾವಿರಾರು ಕೋಟಿ ರೂ. ಅನುದಾನ ನೀಡುವ ಮೂಲಕ ಅಭಿವೃದ್ಧಿ ಪರ್ವಕ್ಕೆ ಕಾರಣರಾಗಿದ್ದಾರೆ. ಈಗಿನ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರೂ ಸಾಕಷ್ಟು ಅನುದಾನ ನೀಡುತ್ತಿದ್ದಾರೆ. ಈ ಕಾರಣಕ್ಕಾಗಿ ಅಭಿವೃದ್ಧಿ ಕಾಮಗಾರಿಗಳು ವೇಗ ಪಡೆದುಕೊಂಡಿವೆ ಎಂದು ತಿಳಿಸಿದರು.

ಸಾನ್ನಿಧ್ಯ ವಹಿಸಿದ ಶ್ರೀ ಚನ್ನಮಲ್ಲಿಕಾರ್ಜುನ ಸ್ವಾಮೀಜಿ ಮಾತನಾಡಿ, 2023ರಲ್ಲಿ ಹಿರೇಕಲ್ಮಠದ ವತಿಯಿಂದ ಹೊನ್ನಾಳಿಯಲ್ಲಿ 'ದಕ್ಷಿಣ ಭಾರತದ ಐದು ರಾಜ್ಯಗಳ ಕೃಷಿ ಮೇಳ' ನಡೆಸಲು ತೀರ್ಮಾನಿಸಲಾಗಿದೆ. ಪ್ರಧಾನಮಂತ್ರಿ ನರೇಂದ್ರ ಮೋದಿ ಹಾಗೂ ಐದು ರಾಜ್ಯಗಳ ಮುಖ್ಯಮಂತ್ರಿಗಳನ್ನು ಮೇಳಕ್ಕೆ ಆಹ್ವಾನಿಸಲಾಗುವುದು. 2022ರ ಮಾರ್ಚ್ ತಿಂಗಳಲ್ಲಿ ಹಿರೇಕಲ್ಮಠದಲ್ಲಿ ನಡೆಯುವ ಒಡೆಯರ್ ಮೃತ್ಯುಂಜಯ ಶಿವಾಚಾರ್ಯ ಸ್ವಾಮೀಜಿ-ಒಡೆಯರ್ ಚಂದ್ರಶೇಖರ ಶಿವಾಚಾರ್ಯ ಸ್ವಾಮೀಜಿ ಅವರ ಪುಣ್ಯಾರಾಧನೆ ಸಮಾರಂಭದಲ್ಲಿ 'ದಕ್ಷಿಣ ಭಾರತದ ಐದು ರಾಜ್ಯಗಳ ಕೃಷಿ ಮೇಳ' ದ ಆಹ್ವಾನ ಪತ್ರಿಕೆ ಬಿಡುಗಡೆ ಮಾಡಲಾಗುವುದು ಎಂದು ವಿವರಿಸಿದರು.

ಅಹಿಂದ ಅಧ್ಯಕ್ಷ ಕೆ. ಮುಕುಡಪ್ಪ, ಮುಷ್ಘೂರು ಓಂಕಾರೇಶ್ವರ ಮಠದ ಶ್ರೀ ರುದ್ರಮುನಿ ಸ್ವಾಮೀಜಿ, ಹರಪನಹಳ್ಳಿ ತೆಗ್ಗಿನಮಠದ ಶ್ರೀ ವರಸದ್ಯೋಜಾತ ಸ್ವಾಮೀಜಿ, ಚನ್ನಗಿರಿಯ ಶ್ರೀ ಡಾ. ಬಸವ ಜಯಚಂದ್ರ ಸ್ವಾಮೀಜಿಗಳು ಮಾತನಾಡಿದರು. ಯೋಗ ಮತ್ತು ಆರೋಗ್ಯ ಕುರಿತು ಸ್ತ್ರೀ ರೋಗ ತಜ್ಞೆ ಡಾ. ವಾಣಿ ಕೋರಿ ಉಪನ್ಯಾಸ ನೀಡಿದರು.

ಎಚ್.ಎ. ಉಮಾಪತಿ, ಹೊಸೂರು ರುದ್ರೇಶ್, ಗೀತಾ ರವೀಂದ್ರ, ರಂಜಿತಾ ಚನ್ನಪ್ಪ, ಶ್ರೀಧರ್, ಜೆ.ಕೆ. ಸುರೇಶ್, ಶಿವಯೋಗಿ, ಪಟ್ಟಣಶೆಟ್ಟಿ ಪರಮೇಶ್ವರಪ್ಪ ಇನ್ನಿತರರಿದ್ದರು.

## ಸ್ಕಂದ ಮಾತೆಗೆ ನಮನ

ಶಿವ ಪಾರ್ವತಿಯರ ಕಂದ
ಕಾವ ಜಗವ ಶ್ರೀ ಸ್ಕಂದ
ಈವ ಸರ್ವರಿಗೂ ಮುದ
ಇವನೇ ನಮ್ಮ ನೆಚ್ಚಿನ ಕಾರ್ತಿಕೇಯ

ಸ್ಕಂದಮಾತ ಬರುವಳು ಐದನೇ ದಿನ
ಪದ್ಮಾಸನದಲ್ಲಿ ಕುಳಿತು ಕಾವಳು ಪ್ರತಿದಿನ
ಬುಧಗ್ರಹದ ಅಧಿಪತಿಗೆ ನಮನ
ಮಂದಾಸ್ಮಿತ ವದನೆ ಪತಿತ ಪಾವನೆ

ಪಂಚಾಮೃತಾಂಭಿಷೇಕ ಮಾಡುವ
ಪಂಚ ಭಕ್ಷ್ಯಗಳ ನೀಡುವ
ಪಂಚಮಿಯ ದಿನದಲಿ ಪೂಜಿಸುವ
ಹಚ್ಚಿ ಧೂಪ ದೀಪಗಳ ಅನುಗ್ರಹ ಬೇಡುವ

ಪರಮಾವಂದ್ಯಳೆ ಸ್ಕಂದಮಾತಾ
ಶರಣು ಬಂದೆವು ಕಾಪಾಡು ಮಾತಾ
ಚತುರ್ಭುಜ ಹೊಂದಿರುವ ಮಾತಾ
ಅರ್ಚಿಸುವೆ ಹಳದಿ ಹೂಗಳಿಂದ ತಾಯೆ

**- ಕೋಮಲ ವಿ ಕುಮಾರ್**

# 'ಕ್ಯಾನ್ಸರ್ ನಡೆ'

**(1ನೇ ಪುಟದಿಂದ)** ವಿಶ್ವಾಸದಿಂದ ಕ್ಯಾನ್ಸರ್ ಎದುರಿಸಿ ಎಂದಿನ ಕೆಲಸಗಳಲ್ಲಿ ತೊಡಗಿಸಿಕೊಂಡಿರುವ ಆರ್.ಜಿ. ಕಾಮರ್ಸ್ ಮತ್ತು ಮ್ಯಾನೇಜ್ ಮೆಂಟ್ ಕಾಲೇಜಿನ ಅಧ್ಯಕ್ಷರಾದ ಶ್ವೇತಾ ಗಾಂಧಿ ಅಭಿಯಾನದಲ್ಲಿ ಭಾಗವಹಿಸಿ ಮೆರಗು ನೀಡಿದರು. ಕಲಾವಿದ ರವೀಂದ್ರ ಅರಳಗುಪ್ಪಿ ಅವರ ಕಲಾಕೃತಿಗಳು ಗಮನ ಸೆಳೆದವು. ದಾವಣಗೆರೆ ಕ್ಯಾನ್ಸರ್ ಫೌಂಡೇಷನ್ ಕಾರ್ಯದರ್ಶಿ ಕ್ಯಾನ್ಸರ್ ತಜ್ಞ ಡಾ. ಸುನೀಲ್ ಬ್ಯಾಡಗಿ ಅಭಿಯಾನವನ್ನು ಯಶಸ್ವಿಯಾಗಿ ನಿರ್ವಹಿಸಿದರು.

# ನಗರದಲ್ಲಿ ಇಂದು ವಿಶ್ವ ಮಾನಸಿಕ ಆರೋಗ್ಯ ದಿನ

ಎಸ್.ಎಸ್. ವೈದ್ಯಕೀಯ ಮಹಾವಿದ್ಯಾಲಯದಲ್ಲಿ ಇಂದು ಬೆಳಿಗ್ಗೆ 10 ಗಂಟೆಗೆ ವಿಶ್ವ ಮಾನಸಿಕ ಆರೋಗ್ಯ ದಿನಾಚರಣೆ ನಡೆಯಲಿದೆ. ಅಧ್ಯಕ್ಷತೆ : ಪ್ರಾಂಶು ಪಾಲ ಡಾ. ಬಿ. ಎಸ್. ಪ್ರಸಾದ್. ಮುಖ್ಯ ಅತಿಥಿ : ಅಭಿಯೋಜನಾ ಇಲಾಖೆ - ಕಾನೂನು ಅಧಿಕಾರಿ ಕೆ.ಜಿ. ಕಲ್ಪನಾ.


**ಮನೆ ಮಾರಾಟಕ್ಕಿದೆ**
ದಾವಣಗೆರೆ ತರಳಬಾಳು ಬಡಾವಣೆ, 2ನೇ ಮೇನ್, 3ನೇ ಕ್ರಾಸ್‌ನ ಕಾರ್ನರ್ ಗ್ರೌಂಡ್‌ಫ್ಲೋರ್‌ನಲ್ಲಿ 3 ಬೆಡ್ ರೂಂನ ಮನೆ ಹಾಗೂ ಮೊದಲ ಮಹಡಿಯಲ್ಲಿ 2 ಬೆಡ್ ರೂಂನ ಎರಡು ಮನೆಗಳು ಇರುವ ಬಿಲ್ಡಿಂಗ್ ಮಾರಾಟಕ್ಕಿದೆ.
94814 52642

**ಸೈಟ್ ಮಾರಾಟಕ್ಕಿದೆ**
ಬನಶಂಕರಿ ಬಡಾವಣೆಯಲ್ಲಿ 40x70 ಅಳತೆ ಸೈಟ್ ಮಾರಾಟಕ್ಕಿದೆ ಮತ್ತು 8500sqft ಅಳತೆಯ ಬ್ಯಾಂಕ್, ಸೂಪರ್ ಮಾರ್ಕೆಟ್, ಗೋಡೌನ್ ಮತ್ತಿತರೆ ಉಪಯೋಗಕ್ಕೆ ಅನುಕೂಲವಾದ ಜಾಗ ನೆಲ ಬಾಡಿಗೆಗೆ ದೊರೆಯುತ್ತದೆ. ಮಧ್ಯವರ್ತಿಗಳಿಗೆ ಅವಕಾಶವಿಲ್ಲ
91081 81864

**ವಾಟರ್ ಪ್ರೂಫಿಂಗ್ (ಮನೆಯ ನೀರು ಸೋರುವಿಕೆಗೆ)**
ನಿಮ್ಮ ಮನೆಯಲ್ಲಿ ಸೀಲಿಂಗ್, ಬಾತ್ ರೂಂ, ಟ್ಯಾಂಕ್ ಮತ್ತು ಹೊರಗಡೆ ಗೋಡೆ ಸೀಳಿರುವುದಕ್ಕೆ ಮತ್ತು ಯಾವುದೇ ರೀತಿಯ ನೀರಿನ ಲೀಕೇಜ್‌ಗೆ ಕಡಿಮೆ ಖರ್ಚಿನಲ್ಲಿ ಪರ್ಮನೆಂಟ್ ಆಗಿ ಸರಿ ಮಾಡಿಕೊಡಲಾಗು ವುದು. ಗ್ಯಾರಂಟಿ ಇರುತ್ತದೆ. ನಿರಂತರವಾಗಿ 15 ವರ್ಷಗಳಿಂದ ಸೇವೆ.
ವಿಶ್ವಾಸಿ ಎಂಟರ್‌ಪ್ರೈಸಸ್ - 96065 57066

**ಬೇಕಾಗಿದ್ದಾರೆ**
ಆಸ್ಪತ್ರೆಯಲ್ಲಿ ಕೆಲಸ ಮಾಡಲು ನುರಿತ ನರ್ಸ್‌ಗಳು, ಅನುಭವವುಳ್ಳ ಎ.ಎನ್.ಎಂ ಆದವರು ಬಯೋಡೇಟಾದೊಂದಿಗೆ ವಿಚಾರಿಸಿ. ಮತ್ತು ಆಯಾ ಬೇಕಾಗಿದ್ದಾರೆ.
ಸ್ಟೇಡಿಯಂ ಹತ್ತಿರ, ಪಿ.ಜೆ.ಬಡಾವಣೆ, ಸಿ.ಜಿ. ಆಸ್ಪತ್ರೆ ಹಿಂಭಾಗ, ಪೆವಿಲಿಯನ್ ರಸ್ತೆ, ದಾವಣಗೆರೆ.
99024-52312, 98450-35710

**ಮನೆ ಬಾಡಿಗೆಗೆ ಇದೆ**
#2285/30, E/1, LIG ಕ್ವಾಟ್ರರ್ಸ್ ವಿದ್ಯಾನಗರ ಪಾರ್ಕ್ ಹತ್ತಿರ, ಮೊದಲನೇ ಮಹಡಿಯಲ್ಲಿ ಪೂರ್ವ ದಿಕ್ಕಿನ 2BHK ಮನೆ ಹಾಗೂ ಸಿಂಗಲ್ ರೂಂ ಬಾಡಿಗೆಗಿದೆ. ವಿದ್ಯಾರ್ಥಿಗಳಿಗೆ/ನೌಕರರಿಗೆ ಮಾತ್ರ.
94480 47581
(ಸಸ್ಯಹಾರಿಗಳಿಗೆ ಮಾತ್ರ)

**ಹೆಲ್ಪರ್ಸ್ ಬೇಕಾಗಿದ್ದಾರೆ**
ಜನತಾವಾಣಿ ಪತ್ರಿಕೆಯಲ್ಲಿ ಪ್ರಿಂಟಿಂಗ್ ವಿಭಾಗದಲ್ಲಿ ಹೆಲ್ಪರ್ ಆಗಿ ಕೆಲಸ ಮಾಡಲು ಕೆಲಸಗಾರರು ಬೇಕಾಗಿದ್ದಾರೆ. ಆಸಕ್ತರು ಬೆಳಗ್ಗೆ 11.30 ನಂತರ ಸಂಪರ್ಕಿಸಿ
ಫೋನ್ : 08192 254736

**ಕರ್ನಾಟಕ ಗೃಹಮಂಡಳಿಯಲ್ಲಿ ಸೈಟ್‌ಗಳು ಮಾರಾಟಕ್ಕಿವೆ**
50x80 East, 40x60 East, 40x50 North, 30x50 West, 30x50 South, 30x50 East 60ಅಡಿ ರೋಡಿಗಿದೆ.
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

**ಬೇಕಾಗಿದ್ದಾರೆ**
ದೋಸೆ ಭಟ್ಟರು ಮತ್ತು ಸಪ್ಲೈಯರ್ ಬೇಕಾಗಿದ್ದಾರೆ. ಸಿದ್ಧಗಂಗಾ ಹೋಟೆಲ್, ದಾವಣಗೆರೆ.
ಸಂಪರ್ಕಿಸಿ
70190 73163

**ಮನೆ ಬಾಡಿಗೆಗೆ ಇದೆ**
ಎಂ.ಸಿ.ಸಿ ಎ ಬ್ಲಾಕ್, 3ನೇ ಮೇನ್, 'ಶ್ರುತಿ ನಿಲಯ', #2595/8, 1ನೇ ಮಹಡಿಯಲ್ಲಿ 2 ಬೆಡ್ ರೂಂನ ಮನೆ ಬಾಡಿಗೆಗೆ ಇದೆ. ಸಂಪರ್ಕಿಸಿ :
ಮೊ. 96633-50010

**ಬೇಕಾಗಿದ್ದಾರೆ**
ರೊಟ್ಟಿ ಖಾನಾವಳಿಗೆ ಅಡುಗೆ ಮಾಡಬಲ್ಲ ಕುಟುಂಬಸ್ಥರು ಬೇಕಾಗಿದ್ದಾರೆ. ಉಚಿತ ವಸತಿ, ಊಟ, ಮಕ್ಕಳ ವಿದ್ಯಾಭ್ಯಾಸ ವ್ಯವಸ್ಥೆ ಇರುತ್ತದೆ. (ಹೆಬ್ಬಾಳ)
84314 16590

**ಮಾರಾಟಕ್ಕೆ**
ನಿಜಲಿಂಗಪ್ಪ ಬಡಾವಣೆ ಸೈಟ್ (ದಕ್ಷಿಣ) 40×60, ತರಳಬಾಳು ಬಡಾವಣೆ ಸೈಟ್(ದಕ್ಷಿಣ)30×50, SS ಲೇಔಟ್ ಸೈಟ್ - 40×63, ಮಹಾಲಕ್ಷ್ಮಿ ಲೇಔಟ್ ಸೈಟ್ (ಉತ್ತಮ್ ಚಂದ್ - ಪಶ್ಚಿಮ) 35×61, ಶಿಕ್ಷಕರ ಬಡಾವಣೆ 2 ನೇ ಹಂತ (ದಕ್ಷಿಣ- ಆವರಗೆರೆ ) 30×40,
78996 36597, 99165 25828

**ಮನೆ ಬಾಡಿಗೆಗೆ ಇದೆ**
2BHK East Facing 1st Floor S.S Layout 'A' Block 9th Croos, ಅಥಣಿ ಕಾಲೇಜ್ ಹತ್ತಿರ ಮನೆ ಬಾಡಿಗೆಗೆ ಇದೆ.
90085 26334

**ಬೇಕಾಗಿದ್ದಾರೆ**
ದಾವಣಗೆರೆ ಸಮೀಪ ಹೊಲದಲ್ಲಿ ಕೆಲಸ ಮಾಡಲು ಮತ್ತು ಆಕಳು ನೋಡಿಕೊಳ್ಳಲು ಆಳು ಬೇಕಾಗಿದ್ದಾರೆ.
70185 88900
95388 70257

**ಸೈಟು ಮಾರಾಟಕ್ಕಿದೆ**
ನಗರದ ಎಂ.ಸಿ.ಸಿ.'ಬಿ' ಬ್ಲಾಕ್ ನ ಬಾಪೂಜಿ ಹೈಸ್ಕೂಲ್ ಪಕ್ಕದಲ್ಲಿ ಹಾದುಹೋಗುವ 21ನೇ ಮುಖ್ಯ ರಸ್ತೆಗೆ 40x60 ಅಡಿ ಅಳತೆಯ ದಕ್ಷಿಣ ದಿಕ್ಕಿನ ಸೈಟು ಮಾರಾಟಕ್ಕಿದೆ.ಆಸಕ್ತರು ನೇರವಾಗಿ ಸಂಪರ್ಕಿಸಿ :
Mohan Real Estate Agencies
Mob : 97424 34049

**REQUIRED**
GENTS AND LADIES WARDEN, RECEPTION & TELECALLING
LOCATION : DAVANGERE
CONTACT : 87628 67557, 78999 17593

**ಸೈಟ್ ಮಾರಾಟಕ್ಕಿದೆ**
ವಿದ್ಯಾನಗರ 40x60 ದಕ್ಷಿಣ, ಬನಶಂಕರಿ 40x70 ಪಶ್ಚಿಮ, ಸೈಟ್ ಮಾರಾಟಕ್ಕೆ ಕೊಳ್ಳುವುದಕ್ಕೆ ಸಂಪರ್ಕಿಸಿ
86181 82332

**ಸೈಟ್‌ಗಳು ಮಾರಾಟಕ್ಕಿವೆ**
ದೂಡಾದಿಂದ ಫೈನಲ್ ಅಪ್ರೂವಲ್ ಆದ ಸೈಟುಗಳು ಯರಗುಂಟೆಯ ಶಿವಪುರದಲ್ಲಿ ಮಾರಾಟಕ್ಕಿವೆ. ಸಂಪರ್ಕಿಸಿ
ಮೊ. 9110898377

**ಮನೆ ಬಾಡಿಗೆಗೆ/ಲೀಸ್‌ಗಿದೆ**
2 ಬೆಡ್‌ರೂಂ, ಕಾರ್ಪೊರೇಷನ್ ಹಾಗೂ ಬೋರ್‌ವೆಲ್ ನೀರಿನ ಸೌಲಭ್ಯವಿರುವ, ವಾಸ್ತು ಪ್ರಕಾರ ಕಟ್ಟಿರುವ ಸುಸಜ್ಜಿತ 2ನೇ ಮಹಡಿ ಮನೆ ನಂ.1890/23, 4ನೇ ಮೇನ್, ಎಲ್‌ಐಸಿ ಕಾಲೋನಿ, ವಿದ್ಯಾನಗರ, ನೂತನ ಕಾಲೇಜ್ ಹಿಂಭಾಗ, ದಾವಣಗೆರೆ ಇಲ್ಲಿ ಬಾಡಿಗೆಗೆ/ಲೀಜ್‌ಗಿದೆ. ಸಂಪರ್ಕಿಸಿ.
93410 12022

**ರೂಂಗಳು ಬಾಡಿಗೆಗಿವೆ**
Ist floor ಹಾಗೂ 2nd Floorನಲ್ಲಿ ರೂಂಗಳು ಬಾಡಿಗೆಗೆ ಇವೆ. ನಂ. 1382/ಎ6, ಸರಸ್ವತಿ ನಗರ, ಬಿ ಬ್ಲಾಕ್, ಕೆಎಸ್ಎಸ್ ಸ್ಕೂಲ್ ಹತ್ತಿರ, ದಾವಣಗೆರೆ.
80956 76644

**ಬೇಕಾಗಿದ್ದಾರೆ**
ಮೆಡಿಹೌಸ್ ಔಷಧಿ ಅಂಗಡಿಯಲ್ಲಿ ಕೆಲಸ ಮಾಡಲು ಹುಡುಗರು ಬೇಕಾಗಿದ್ದಾರೆ. PUC or Any Degree.
ವಿಳಾಸ : ಕಾವೇರಿ ಮೆಡಿಹೌಸ್ ಪ್ರೈ.ಲಿ.
ಚೇತನಾ ಹೋಟೆಲ್ ಹತ್ತಿರ, ದಾವಣಗೆರೆ-577 002.

**2 BHK ಮನೆ ಬಾಡಿಗೆಗಿದೆ**
ಕೆ.ಬಿ. ಬಡಾವಣೆ, ಕೆನರಾ ಬ್ಯಾಂಕ್ ಹತ್ತಿರ, ಬಸ್‌ಸ್ಟ್ಯಾಂಡ್ ಹಾಗೂ ರೈಲ್ವೇ ಸ್ಟೇಷನ್ ಹತ್ತಿರ 2 BHK ಮನೆ ಬಾಡಿಗೆಗೆ ಇದೆ.
99646 86492
(ಸಸ್ಯಹಾರಿಗಳಿಗೆ ಮಾತ್ರ)

**ಮನೆ ಮಾರಾಟಕ್ಕಿವೆ**
ಮಾವಿನ ತೋಪ್ ಹಾಸ್ಪಿಟಲ್ ಹಿಂಭಾಗ, ಕುವೆಂಪು ಬಡಾವಣೆಯಲ್ಲಿ 40x60 North ಮೂರು ಬೆಡ್ ರೂಂ, ಇಂಡಿಪೆಂಡೆಂಟ್ ಹೌಸ್
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

**ಬೇಕಾಗಿದ್ದಾರೆ**
ರೆಡಿಮೇಡ್ ಗಾರ್ಮೆಂಟ್ಸ್ ಶೋ ರೂಂನಲ್ಲಿ ಕೆಲಸ ಮಾಡಲು ಹುಡುಗಿಯರು ಬೇಕಾಗಿದ್ದಾರೆ. ಅನುಭವ ಇರುವ/ ಇಲ್ಲದವರಾದರೂ ಸಂಪರ್ಕಿಸಬಹುದು.
ಬುನಿಯಾದ್
ಅಶೋಕ ರೋಡ್, ದಾವಣಗೆರೆ.
98445 82000

**ಜಮೀನು ಮಾರಾಟಕ್ಕಿದೆ**
GMIT ಯಿಂದ ಹರಿಹರಕ್ಕೆ ಹೋಗುವ ರಸ್ತೆಯಲ್ಲಿ ಪೆಟ್ರೋಲ್ ಬಂಕ್ ಎದುರು ಇರುವ 1.08 ಎಕರೆ ರೋಡಿಗೆ ಲಗತ್ತಾಗಿರುವ ಜಮೀನು ಮಾರಾಟಕ್ಕಿದೆ.
8139988555
8197300410

**ತೋಟ ಮಾರಾಟಕ್ಕಿದೆ**
ದಾವಣಗೆರೆಯಿಂದ 16 ಕಿ.ಮೀ ದೂರದಲ್ಲಿ 4 ಎಕರೆ 30 ಸೆಂಟ್ಸ್ ಅಪೋಸ್ ಮಾವಿನ ತೋಟ, 2ಎಕರೆ 30 ಸೆಂಟ್ಸ್ ತೆಂಗು ಇದರಲ್ಲಿ ಅಡಕೆ ಫಸಲಿಗೆ ಬಂದಿರುವ ತೋಟ ಮಾರಾಟಕ್ಕಿದೆ. ಆಸಕ್ತರು ಸಂಪರ್ಕಿಸಿ
98809 33630

**ಅಂಗಡಿ ಬಾಡಿಗೆ/ ಲೀಸ್‌ಗಿದೆ**
ಅಂಗಡಿ ಬಾಡಿಗೆಗೆ ಮತ್ತು ಲೀಸ್‌ಗಿದೆ. ಹಾಸ ಬಾವಿ ಸರ್ಕಲ್ N.R. Road
76769 22709

**ಬೇಕಾಗಿದ್ದಾರೆ**
ಬೇಕರಿ ಉತ್ಪನ್ನಗಳ ಕೆಲಸಕ್ಕೆ ಇಬ್ಬರು ಸಹಾಯಕರು ಹಾಗೂ ಕಾರಾ (ಕಾಂಡಿಮೆಂಟ್ಸ್) ಮಾಡಲು ಬೇಕಾಗಿದ್ದಾರೆ.ಸಂಪರ್ಕಿಸಿ
98448 33706

**WANTED**
1 Nursing Tutors
B.Sc Nursing passed candidates can apply
Call : 98440 65638

**ಸೈಟ್ ಮಾರಾಟಕ್ಕಿವೆ**
ಎಂ.ಸಿ.ಸಿ 'ಬಿ' ಬ್ಲಾಕ್ 40x60 ಪೂರ್ವ, ಎಂ.ಸಿ.ಸಿ 'ಬಿ' ಬ್ಲಾಕ್ 40x60 ಪೂರ್ವ, ಎಸ್.ಎಸ್ ಲೇಔಟ್ 30x40, 30x40 ಪೂರ್ವ, ನಿಜಲಿಂಗಪ್ಪ ಬಡಾವಣೆ 40x60, 30x50 ಸೈಟ್‌ಗಳು ಕೊಳ್ಳುವವರು, ಮಾರುವವರು ಸಂಪರ್ಕಿಸಿ
ರಿಯಲ್ ಎಸ್ಟೇಟ್ ಏಜೆಂಟ್ ಪ್ರಶಾಂತ್
99726 70257

**ಶ್ರೀ ಕಾಮಾಕ್ಷಿ ಸ್ವರ್ಣ ಉಳಿತಾಯ ಯೋಜನೆ**
1ನೇ ಲಕ್ಕಿ ಡ್ರಾ ನಂಬರ್
615
ಡಾ|| ಕೆ. ಪ್ರದೀಪ್ S/o. ಗುರುಬಸಪ್ಪ
ಅತ್ಯುತ್ತಮ ಆಭರಣಕ್ಕಾಗಿ ಇಂದೇ ಭೇಟಿ ಕೊಡಿ:
ರಾಯ್ಕರ್ ಜ್ಯುವೆಲರಿ ವರ್ಕ್ಸ್ ಅಂಡ್ ಜೆಮ್ಸ್
ಶ್ರೇಷ್ಠ ಜಾತಿಯ ಅದೃಷ್ಟ ಹರಳುಗಳ, ರುದ್ರಾಕ್ಷಿಗಳ ಆಗರ
8ನೇ ಮೇನ್, ಚರ್ಚ್ ರಸ್ತೆ, ಪಿ.ಜೆ. ಬಡಾವಣೆ, ದಾವಣಗೆರೆ-2. ಫೋನ್ : 08192-252589

**WANTED**
Receptionist -2 No's(Female) for a Resort, (NH-4 Highway) Near Davanagere.
Qualification: Any Degree with Good Communication Skill & Computer Knowledge
9880975286

**SHOPS FOR RENT**
With wash room facility. N.R Road Davangere.
94483 69523

**ಬೇಕಾಗಿದ್ದಾರೆ**
ಡಿಪಾರ್ಟ್‌ಮೆಂಟಲ್ ಸ್ಟೋರ್‌ನಲ್ಲಿ ಕೆಲಸ ಮಾಡಲು ಸೇಲ್ಸ್ ಗರ್ಲ್ಸ್ ಬೇಕಾಗಿದ್ದಾರೆ. BIO DATA ಜೊತೆ ಸಂಪರ್ಕಿಸಿ: Sanjay
94807 77622

**ಸುವರ್ಣ ಉದ್ಯೋಗಾವಕಾಶ**
ವಿದ್ಯಾರ್ಹತೆ : ಪಿಯುಸಿ or any ಡಿಗ್ರಿ. ವಯಸ್ಸು 18 ವರ್ಷ ಮೇಲ್ಪಟ್ಟು, ಯುವಕ-ಯುವತಿಯರು ಬೇಕಾಗಿದ್ದಾರೆ. ರೂ 9,000 - 12,000 ವರೆಗೆ. ನಿಮ್ಮ ವೃತ್ತಿಪರತೆ ನೋಡಿ ವೇತನ ಹೆಚ್ಚಿಸಲಾಗುವುದು ಹಾಗೂ ಯುವಕರಿಗೆ ದ್ವಿಚಕ್ರ ವಾಹನ ಇರುವವರಿಗೆ ಆದ್ಯತೆ, ಜೊತೆಗೆ ಡಿ.ಎಲ್., ಆರ್.ಸಿ. ಕಾರ್ಡ್ ಹೊಂದಿರಬೇಕು.
Ph : 8951455892, 99023 42040
ಅಡ್ರೆಸ್ : ಎಸ್.ಎಸ್. ಹೈಟೆಕ್ ಹಾಸ್ಪಿಟಲ್ ಮೇನ್ ರೋಡ್, ಲಕ್ಷ್ಮೀ ಲೇಔಟ್, ದಾವಣಗೆರೆ.

**ಸೈಟ್‌ಗಳು ಮಾರಾಟಕ್ಕಿವೆ**
ದಾವಣಗೆರೆ RTO ಆಫೀಸ್ ಎದುರುಗಡೆ 30x40 ರೆವಿನ್ಯೂ ಸೈಟ್ (ಪ್ರತಿ ಅಡಿಗೆ 1100 ರೂ), 20x30 ಅಲಿನೇಷನ್ ಸೈಟ್ ಮಾರಾಟಕ್ಕಿವೆ.
95383 94042

**ಭೂಮಿಕಾ ಮ್ಯಾಟ್ರಿಮೊನಿ**
ಲಿಂಗಾಯಿತ ವಧು-ವರರ ಕೇಂದ್ರ
H.O : Near Coffee day, Nutana Collage Road, Vidyanagara, 2nd main, Davangere
77603 16576
90080 55813

**ಸೈಟ್‌ಗಳು ಮಾರಾಟಕ್ಕಿವೆ**
ಸಿದ್ದವೀರಪ್ಪ ಬಡಾವಣೆ, ಆಂಜನೇಯ ಬಡಾವಣೆ, ಸರಸ್ವತಿ ನಗರ, ಎಸ್.ಎಸ್. ಲೇಔಟ್
99459 91983

**ಕಮರ್ಷಿಯಲ್ ಸೈಟು ಮಾರಾಟಕ್ಕಿದೆ**
ನಗರದ B.I.E.T. ರಸ್ತೆಗೆ, ಹೇಮಾವತಿ ಹಾಸ್ಟೆಲ್ ಎದುರು ಒಟ್ಟು 3200 ಅಡಿ ಇರುವ ಕಾರ್ನರ್ ಸೈಟು ಮಾರಾಟಕ್ಕಿದೆ. ಆಸಕ್ತರು ನೇರವಾಗಿ ಸಂಪರ್ಕಿಸಿ.
Mohan Real Estate Agencies
97424 34049

**ಪ್ರವೇಶ ಪ್ರಕಟಣೆ**
ಕರೆಸ್ಪಾಂಡೆನ್ಸ್/ ರೆಗ್ಯುಲರ್
SSLC, PUC, BA, B.Com, B.Sc, MA, M.Com, MSc, MBA, All PG & Diploma Courses
S.S. Global Institute for Higher Education, Davanagere.
72593 59861, 99863 45266

**ನೇರ ಪರೀಕ್ಷೆಗಳು**
ಉನ್ನತ ಶಿಕ್ಷಣಕ್ಕೆ ಮತ್ತು ಸರ್ಕಾರಿ ಕೆಲಸಕ್ಕೆ ಉಪಯೋಗ SSLC, PUC Degree Pharmacy & BHMS (Government & Private College)
ಶ್ರೀ ಸಾಯಿ ಕರೆಸ್ಪಾಂಡೆನ್ಸ್ ಕಾಲೇಜ್
ಸೋಮು ಮೆಡಿಕಲ್ಸ್ ಮೇಲೆ, ಗಣೇಶ ದೇವಸ್ಥಾನದ ಹಿಂಭಾಗ, ರಾಂ ಅಂಡ್ ಕೋ ಸರ್ಕಲ್, ದಾವಣಗೆರೆ.
87490 24789, 94837 64859, 90080 67049

**HOUSE FOR RENT**
#5628/D-23, 2BHK 2nd floor, 4th Main, 6th Cross (left) Near Indoor Neharu Stadium S.S. Badavane 'B' Block House Name SHIVARATNA (Brokers Not Allowed)
94489 29509

**ಸೇಲ್ಸ್ ಮನ್ ಬೇಕಾಗಿದ್ದಾರೆ**
18 ವರ್ಷ ಮೇಲ್ಪಟ್ಟವರು ಹಾಗೂ ಅನುಭವವುಳ್ಳವರು ಮಾತ್ರ ಸಂಪರ್ಕಿಸಿ :
ಮಣಿಕಂಠ ಏಜೆನ್ಸೀಸ್
ಜಯದೇವ ಪ್ರೆಸ್ ಹಿಂಭಾಗ, ಚೌಕಿಪೇಟೆ, ದಾವಣಗೆರೆ.
94482 33326
78991 35660

**ಬೇಕಾಗಿದ್ದಾರೆ**
SSLC/PUC ಆದ ಮಹಿಳೆಯರು ರ್‍ಯಾಕ್ ನಿಂದ ಸ್ಟಾಕ್ ತೆಗೆಯಲು ಹಾಗೂ ಅನುಭವವುಳ್ಳ ಬಿಲ್ಲಿಂಗ್ ಕ್ಲರ್ಕ್ ಸಗಟು ಔಷಧಿ ಅಂಗಡಿಗೆ ಬೇಕಾಗಿದ್ದಾರೆ. ಭೇಟಿ ಮಾಡುವ ಸಮಯ ಸಂಜೆ:6:30 ರ ನಂತರ
ಶ್ರೀ ಗುರು ಎಂಟರ್ ಪ್ರೈಸಸ್
#579, 6ನೇ ಮುಖ್ಯ ರಸ್ತೆ ಪಿ.ಜೆ ಬಡಾವಣೆ, ದಾವಣಗೆರೆ.

**ಲೀಸ್ 12 ಲಕ್ಷ/ಬಾಡಿಗೆ 10,500**
ZP, TV ಸ್ಟೇಷನ್, ನ್ಯಾಯಾಲಯ, ಹೈಟೆಕ್ ಆಸ್ಪತ್ರೆ, ಸರ್.ಎಂ.ವಿ, ಲಲಿತ ಕಾಲೇಜ್, ಶಶಿ ಸೋಪ್, ಸುಬ್ರಮಣ್ಯ ದೇವಸ್ಥಾನದ ಹತ್ತಿರ ಸುಸಜ್ಜಿತ ನೀರು ಲಿಫ್ಟ್, ಕಾರ್ ಪಾರ್ಕಿಂಗ್‌ವುಳ್ಳ ಉತ್ತರ ದಿಕ್ಕಿನ 2 ಬೆಡ್ ರೂಂ ವಾಸ್ತು ಪ್ರಕಾರವಿದೆ.
99865 38099, 99004 11110

**ನೇರ ಪರೀಕ್ಷೆಗಳು**
ಮನೆಯಲ್ಲೇ ಓದಿ ನೇರ ಪರೀಕ್ಷೆ ಬರೆಯುವ ಅವಕಾಶ
PUC, SCIENCE, COMMERCE, ARTS
ಉನ್ನತ ಶಿಕ್ಷಣಕ್ಕೆ/ಸರ್ಕಾರಿ ಕೆಲಸಕ್ಕೆ ಮತ್ತು ಮುಂಬಡ್ತಿ ಪಡೆಯಲು ಉಪಯೋಗವಾಗುತ್ತದೆ. ಕೊನೆಯ ದಿ:23.10.2021
ಮಾನಸ ಎಜುಕೇಷನ್ ಟ್ರಸ್ಟ್(ರಿ.)
ಎಲ್.ಕೆ.ಕಾಂಪ್ಲೆಕ್ಸ್, 1ನೇ ಮಹಡಿ, ಅಶೋಕ ರಸ್ತೆ, 1ನೇ ಕ್ರಾಸ್, ದಾವಣಗೆರೆ.
97402 58276

## ಸಮಾಜಮುಖಿ ಕಾರ್ಯಗಳಿಂದ ಸಂಘಟನೆಗಳಿಗೆ ಸಾರ್ಥಕತೆ



**ಭರಮಸಾಗರದ ಕಾರ್ಯಕ್ರಮದಲ್ಲಿ ಸಮಾಜ ಸೇವಕರಾದ ಬಿ. ಲೋಲಾಕ್ಷಮ್ಮ**

ಭರಮಸಾಗರ,ಅ. 10- ಹಿರಿಯರಿಗೆ, ವಿದ್ಯೆ ಕಲಿಸಿದ ಗುರುಗಳಿಗೆ ಗೌರವ ಕೊಡುವ ಸಂಸ್ಕೃತಿಯೇ ನಿಜವಾದ ಸಂಸ್ಕಾರ. ಯಾವುದೇ ಫಲಾಪೇಕ್ಷೆಯ ನಿರೀಕ್ಷೆ ಇಲ್ಲದೇ ನಿಸ್ವಾರ್ಥದಿಂದ ಸಮಾಜಮುಖಿ ಕಾರ್ಯಗಳಿಂದ ಸಂಘಟನೆಗಳಿಗೆ ಸಾರ್ಥಕತೆ ಬರುತ್ತದೆ ಎಂದು ಸಮಾಜ ಸೇವಕರಾದ ಬಿ. ಲೋಲಾಕ್ಷಮ್ಮ ಅವರು ಪ್ರತಿಪಾದಿಸಿದರು.

ಇಲ್ಲಿನ ಪವಮಾನ ಪ್ರತಿಷ್ಠಾನದ ಆಶ್ರಯದಲ್ಲಿ ವಾಣಿನಿವಾಸ ಸಭಾಂಗಣದಲ್ಲಿ ಮೊನ್ನೆ ಏರ್ಪಾಡಾಗಿದ್ದ ಸಾಧಕರ ಅಭಿನಂದನಾ ಸಮಾರಂಭವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಬೆಳಗಾವಿಯ ಕಸ್ತೂರಿ ಸಿರಿಗನ್ನಡ ವೇದಿಕೆಯಿಂದ ದ್ಯಾವಿಭೂಷಣ ಅಂತರರಾಷ್ಟ್ರೀಯ ಪ್ರಶಸ್ತಿಗೆ ಭಾಜನರಾದ ಸಾಲಿಗ್ರಾಮ ಗಣೇಶ್ ಶೆಣೈ ಅವರನ್ನು ಸನ್ಮಾನಿಸಿ, ಗೌರವಿಸಿ, ಅಭಿನಂದಿಸಲಾಯಿತು.

ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಭರಮಸಾಗರ ಗ್ರಾಮ ಪಂಚಾಯಿತಿ ಅಧ್ಯಕ್ಷರಾದ ಶ್ರೀಮತಿ ಪುಷ್ಪಲತಾ ಜಗದೀಶ್, ಶ್ರೀಮತಿ ವೀಣಾ ಶಿವಯೋಗಿ, ಡಿ.ಎಸ್.ರಾಜು, ಗೌರಮ್ಮ ಶಿವಲಿಂಗಯ್ಯ ಮುಂತಾದವರು ಮಾತನಾಡಿದರು.

ಪ್ರತಿಷ್ಠಾನದ ಗೌರವ ಅಧ್ಯಕ್ಷರಾದ ಶ್ರೀಮತಿ ಜಯಮ್ಮ ಜಯರಾವ್, ಪ್ರಧಾನ ಕಾರ್ಯದರ್ಶಿ ಶ್ರೀಮತಿ ವಿಜಯಲಕ್ಷ್ಮಿ ಅನಂತಪದ್ಮನಾಭ ರಾವ್ ಅವರುಗಳು ಸಮಾರಂಭದ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಪ್ರತಿಷ್ಠಾನದ ಸಂಸ್ಥಾಪಕ ಬಿ.ಜೆ. ಅನಂತಪದ್ಮನಾಭ ರಾವ್ ಸ್ವಾಗತಿಸಿ, ಪ್ರಾಸ್ತಾವಿಕವಾಗಿ ಮಾತನಾಡಿದರು. ಕು. ಅಂಜನಾರಾವ್ ಕಾರ್ಯಕ್ರಮ ನಿರೂಪಿಸಿದರು. ಕು. ಅಕ್ಷತಾರಾವ್ ವಂದಿಸಿರು.

## ಒತ್ತಡ ಮುಕ್ತ ಜೀವನಕ್ಕೆ ಸಂಗೀತ, ಕಲೆ, ಧ್ಯಾನಗಳತ್ತ ಇರಲಿ ಚಿತ್ತ

**ಸುಗಮ ಸಂಗೀತೋತ್ಸವದಲ್ಲಿ ವಿರಕ್ತ ಮಠದ ಶ್ರೀ ಬಸವ ಪ್ರಭು ಸ್ವಾಮೀಜಿ ಆಶಯ**

ದಾವಣಗೆರೆ, ಅ.10- ಮನುಷ್ಯ ಒತ್ತಡದಿಂದ ಮುಕ್ತನಾಗಲು ಸಂಗೀತ, ಕಲೆ, ಧ್ಯಾನಗಳತ್ತ ಮುಖ ಮಾಡಬೇಕಾಗಿದೆ. ಆದರೆ ಜನರು ಒತ್ತಡ ನಿವಾರಣೆಗಾಗಿ ದುಶ್ಚಟಗಳ ದಾಸರಾಗಿ, ಆರೋಗ್ಯ ಹಾಳು ಮಾಡಿಕೊಳ್ಳುತ್ತಿದ್ದಾರೆ ಎಂದು ವಿರಕ್ತಮಠದ ಶ್ರೀ ಬಸವ ಪ್ರಭು ಸ್ವಾಮೀಜಿ ಹೇಳಿದರು.

ನಗರದ ರೋಟರಿ ಬಾಲಭವನದಲ್ಲಿ ಜಿಲ್ಲಾ ವಾದ್ಯವೃಂದ ಕಲಾವಿದರ ಸಂಘ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಂಯುಕ್ತಾಶ್ರಯದಲ್ಲಿ ಇಂದು ಹಮ್ಮಿಕೊಂಡಿದ್ದ ಸುಗಮ ಸಂಗೀತೋತ್ಸವ ಕಾರ್ಯಕ್ರಮದ ಸಾನ್ನಿಧ್ಯ ವಹಿಸಿ ಮಾತನಾಡಿದರು.

ಸಂಗೀತಕ್ಕೆ ಅದ್ಭುತ ಶಕ್ತಿ ಇದೆ. ಅಂತಹ ಸಂಗೀತವನ್ನು ಶ್ರೋತೃಗಳಿಗೆ ನೀಡುವ ಅಪ್ರತಿಮ ಕಲಾವಿದರೂ ಸಹ ಇದ್ದಾರೆ. ಆದರೆ ಅವರು ಒತ್ತಡ ನಿವಾರಣೆಗಾಗಿ ಮದ್ಯದಂಗಡಿ ಕಡೆ ಮುಖ ಮಾಡುತ್ತಾರೆ. ಬೆಂಗಳೂರುಗಳಂತಹ ಮಹಾನಗರಗಳಲ್ಲಿ ಮಹಿಳೆಯರೂ ಕೂಡ ಬಾರ್‌ಗಳತ್ತ ಹೆಜ್ಜೆ ಹಾಕುತ್ತಿರುವುದು ವಿಷಾದದ ಸಂಗತಿ ಎಂದರು.

ಇತ್ತೀಚಿನ ದಿನಗಳಲ್ಲಿ ಕಲೆಗೆ ಅಷ್ಟೊಂದು ಬೆಲೆ ಸಿಗುತ್ತಿಲ್ಲ. ಕೆಲ ಕಲಾವಿದರು ದುಶ್ಚಟಗಳಿಗೆ ಬಲಿಯಾಗಿ ತಮ್ಮ ದುಡಿಮೆ ಹಣವನ್ನು ವ್ಯಯಿಸುವುದಲ್ಲದೆ, ತಮ್ಮ ಆರೋಗ್ಯ ಹಾಳು ಮಾಡಿಕೊಳ್ಳುತ್ತಿದ್ದಾರೆ. ಕಲಾವಿದರು ಸಮಾಜದ ಆಸ್ತಿ. ಅವರು ತಮ್ಮ ಆರೋಗ್ಯ ಹಾಗೂ ಆರ್ಥಿಕ ಸ್ಥಿತಿಯನ್ನು ಉತ್ತಮಪಡಿಸಿಕೊಳ್ಳುವತ್ತ ಗಮನಹರಿಸಿಕೊಳ್ಳಬೇಕಾಗಿದೆ ಎಂದು ಸಲಹೆ ನೀಡಿದರು.



ಇಂದಿನ ಆಧುನಿಕ ಯುಗದಲ್ಲಿ ಮಾನಸಿಕ ಕಾಯಿಲೆಗಳಿಗೆ ಸಂಗೀತ ಮತ್ತು ಕಲೆ ದಿವ್ಯೌಷಧಿಯಾಗಿದೆ. ಇವು ಮನುಷ್ಯನ ಖಿನ್ನತೆ ಹಾಗೂ ಗೊಂದಲಗಳನ್ನು ನಿವಾರಣೆ ಮಾಡುತ್ತವೆ ಎಂದರು.

ಕಾರ್ಯಕ್ರಮಕ್ಕೆ ಚಾಲನೆ ನೀಡಿದ ಮೇಯರ್ ಎಸ್.ಟಿ. ವೀರೇಶ್ ಮಾತನಾಡಿ, ಪ್ರತಿ ತಿಂಗಳು ಪಾಲಿಕೆ ಆವರಣದಲ್ಲಿರುವ ಪುಟ್ಟಣ್ಣ ಕಣಗಾಲ್ ವಾದ್ಯಮಂಟಪದಲ್ಲಿ ಮನರಂಜನಾ ಕಾರ್ಯಕ್ರಮ ಆಯೋಜನೆಗೆ ಸಾಮಾನ್ಯ ಸಭೆಯಲ್ಲಿ ತೀರ್ಮಾನಿಸಲಾಗಿದೆ ಎಂದರು.

ಜಿಲ್ಲಾ ಕಲಾವಿದರ ಸಂಘದ ಅಧ್ಯಕ್ಷ ಆರ್. ಪರಮೇಶ್ವರಪ್ಪ ಅಧ್ಯಕ್ಷತೆ ವಹಿಸಿದ್ದರು. ಸಂಘದ ಗೌರವಾಧ್ಯಕ್ಷ ಚಿಂದೋಡಿ ಶಂಭುಲಿಂಗಪ್ಪ ಪ್ರಾಸ್ತಾವಿಕವಾಗಿ ಮಾತನಾಡಿದರು. ಧರ್ಮರಾಜ್, ರಾಜು ಮತ್ತಿತರರು ಉಪಸ್ಥಿತರಿದ್ದರು.

## ನೂರು ದಿನ ಸಾವಿರ ಹಳ್ಳಿಗಳಿಗೆ ಭೇಟಿ

ದಾವಣಗೆರೆ, ಅ.10- ಭಕ್ತರ ಜೊತೆಗಿದ್ದು ಮಠವನ್ನು ಬೆಳೆಸುವ ಮತ್ತು ಸಮಾಜವನ್ನು ಒಗ್ಗೂಡಿಸುವ ಸದುದ್ದೇಶದಿಂದ ಬರುವ ಮಕರ ಸಂಕ್ರಾಂತಿಯ ದಿನದಿಂದ ಕಾಗಿನೆಲೆ ಪೀಠದ ಹೊಸದುರ್ಗ ಶಾಖಾಮಠದ ವ್ಯಾಪ್ತಿಗೆ ಬರುವ ಜಿಲ್ಲೆಗಳಲ್ಲಿ 100 ದಿನ ಸಾವಿರ ಹಳ್ಳಿಗಳಿಗೆ ಭೇಟಿ ಮಾಡಲಾಗುವುದು ಎಂದು ಶ್ರೀ ಈಶ್ವರಾನಂದಪುರಿ ಸ್ವಾಮೀಜಿ ಹೇಳಿದರು.

ತಾಲ್ಲೂಕಿನ ಲೋಕಿಕೆರೆ ಗ್ರಾಮದ ಶ್ರೀ ಬೀರಲಿಂಗೇಶ್ವರ ದೇವಸ್ಥಾನದಲ್ಲಿ ನಡೆದ ಪೂರ್ವಭಾವಿ ಸಭೆಯ ಸಾನ್ನಿಧ್ಯ ವಹಿಸಿ ಶ್ರೀಗಳು ಮಾತನಾಡಿದರು.

ಹೊಸದುರ್ಗ ಶಾಖಾಮಠದ ಆವರಣದಲ್ಲಿ 30 ಎಕರೆ ಜಮೀನಿನಲ್ಲಿ ಸುಮಾರು 20 ಕೋಟಿ ರೂ.ಗಳ ವೆಚ್ಚದಲ್ಲಿ ಕಾಮಗಾರಿಗಳನ್ನು ಕೈಗೊಂಡಿದ್ದು, ಈಗಾಗಲೇ 12 ಕೋಟಿ ರೂ.ಗಳ ಕಾಮಗಾರಿ ಪೂರ್ಣಗೊಂಡಿದೆ. ಇನ್ನೂ 8 ಕೋಟಿ ರೂ. ವೆಚ್ಚದ ಕಾಮಗಾರಿ ಬಾಕಿಯಿದೆ. ಅದರಲ್ಲಿ ದೇಶದಲ್ಲಿಯೇ ಅತಿ ಎತ್ತರದ ಕನಕದಾಸರ ಏಕಶಿಲಾ ಮೂರ್ತಿಯ ಕೆತ್ತನೆಯ ಕೆಲಸ ಸಹ ಸೇರಿದೆ ಎಂದು ಹೇಳಿದರು.

ಶಾಖಾಮಠದ ವ್ಯಾಪ್ತಿಗೆ ಬರುವ ಶಿವಮೊಗ್ಗ, ದಾವಣಗೆರೆ, ಚಿತ್ರದುರ್ಗ, ತುಮಕೂರು, ಕೋಲಾರ, ದೊಡ್ಡಬಳ್ಳಾಪುರ, ರಾಮನಗರ, ಬೆಂಗಳೂರು ನಗರ ಜಿಲ್ಲೆಗಳ ವ್ಯಾಪ್ತಿಗೆ ಬರುವ ಸಾವಿರ ಗ್ರಾಮಗಳನ್ನು ನೂರು ದಿನಗಳಲ್ಲಿ ಸಮಾಜ ಬಾಂಧವರನ್ನು ಭೇಟಿ ಮಾಡುವ ಮಹತ್ವದ ಕಾರ್ಯವನ್ನು ಕೈಗೊಳ್ಳಲಾಗಿದೆ. ಭಕ್ತರು ಭಾಗವಹಿಸುವಂತೆ ಮನವಿ ಮಾಡಿದರು.



**ಹೊಸದುರ್ಗದ ಶ್ರೀ ಈಶ್ವರಾನಂದಪುರಿ ಸ್ವಾಮೀಜಿ**

ಈಗಾಗಲೇ ಕಾಗಿನೆಲೆ ಪೀಠಾಧ್ಯಕ್ಷರಾದ ಶ್ರೀ ನಿರಂಜನಾನಂದಪುರಿ ಸ್ವಾಮೀಜಿ ನೇತೃತ್ವದಲ್ಲಿ ಶಿಕ್ಷಣ ಸಂಸ್ಥೆಗಳನ್ನು ಕಟ್ಟುವ ಕೆಲಸ ನಡೆಯುತ್ತಿದ್ದು, ನಮ್ಮ ಮಠದ ವ್ಯಾಪ್ತಿಯಲ್ಲಿ ಸದ್ಯ ಆರು ಸಾವಿರ ವಿದ್ಯಾರ್ಥಿಗಳು ಶಿಕ್ಷಣ ಪಡೆಯುತ್ತಿದ್ದಾರೆ. ಮುಂದಿನ ದಿನಗಳಲ್ಲಿ ಇನ್ನಷ್ಟು ಶಾಲಾ-ಕಾಲೇಜುಗಳನ್ನು ಮತ್ತು ಹಾಸ್ಟೆಲ್‌ಗಳನ್ನು ತೆರೆಯುವ ಮೂಲಕ ಕನಿಷ್ಠ 1 ಲಕ್ಷ ಮಕ್ಕಳಿಗೆ ಶಿಕ್ಷಣ ನೀಡುವ ಗುರಿ ಹೊಂದಲಾಗಿದೆ ಎಂದರು.

ಸಭೆಯಲ್ಲಿ ಜಿ.ಪಂ. ಮಾಜಿ ಸದಸ್ಯ ಎಸ್. ವೆಂಕಟೇಶ್, ಎಪಿಎಂಸಿ ಮಾಜಿ ಅಧ್ಯಕ್ಷ ಬಿ.ಎಂ. ಸತೀಶ್, ಕುರುಬ ಸಮಾಜದ ತಾಲ್ಲೂಕು ಪ್ರಧಾನ ಕಾರ್ಯದರ್ಶಿ ಅಣಬೇರು ಶಿವಮೂರ್ತಿ, ನಿವೃತ್ತ ಜಿಲ್ಲಾ ನೋಂದಣಾಧಿಕಾರಿ ಮಾಯಕೊಂಡದ ಮಲ್ಲಿಕಾರ್ಜುನಪ್ಪ, ಕುರುಬ ಸಮಾಜದ ತಾಲ್ಲೂಕು ಅಧ್ಯಕ್ಷ ಮುದಹದಡಿ ದಿಳ್ಳೆಪ್ಪ, ತಾಪಂ ಮಾಜಿ ಸದಸ್ಯ ಅಂಜಿನಪ್ಪ, ಗ್ರಾಪಂ ಮಾಜಿ ಅಧ್ಯಕ್ಷ ಮತ್ತಿ ಮಂಜುನಾಥ್, ಮುಖಂಡರಾದ ಸಿ.ಡಿ. ಮಹೇಂದ್ರ, ರಾಮಗೊಂಡನಹಳ್ಳಿ, ಮಳಲ್ಕೆರೆ ಪ್ರಕಾಶ್, ಅಣಜಿ ಗುಡ್ಡೇಶ್, ಬಟ್ಲಕಟ್ಟೆ ಬೀರೇಶ್, ಕೊಗ್ಗನೂರು ಮಂಜಣ್ಣ, ಎಂ.ಡಿ.ನಿಂಗಪ್ಪ, ಎಸ್.ಎಸ್. ರವಿಕುಮಾರ್ ಮಾತನಾಡಿದರು.

ಕೆ.ಹೆಚ್. ಕುಬೇರಪ್ಪ, ಅಡಿವೆಪ್ಪ, ಉಮೇಶ್, ಲೋಕಪ್ಪ, ಪಿ.ಟಿ. ಹನುಮಂತಪ್ಪ, ಎಂ.ಕೆ. ದಾನಪ್ಪ ಮತ್ತಿತರರು ಇದ್ದರು.

ಇಪ್ಪಾ ಕಲಾವಿದ ಅಂಜಿನಪ್ಪ ಲೋಕಿಕೆರೆ ಕ್ರಾಂತಿಗೀತೆ ಹಾಡಿದರು. ಶಿಕ್ಷಕ ಶಂಕರಮೂರ್ತಿ ಸ್ವಾಗತಿಸಿದರು.

## ತುಳಜಾ ಭವಾನಿ ದೇವಸ್ಥಾನದಲ್ಲಿ ಚಂಡಿಕಾ ಹೋಮ



ದಾವಣಗೆರೆ, ಅ.10- ಸ್ಥಳೀಯ ಕೆಟಿಜೆ ನಗರ 3ನೇ ಮುಖ್ಯ ರಸ್ತೆಯ 11 ಮತ್ತು 12ನೇ ಕ್ರಾಸ್‌ನಲ್ಲಿರುವ ಶ್ರೀ ತುಳಜಾ ಭವಾನಿ ದೇವಸ್ಥಾನದಲ್ಲಿ ನಾಡ ಹಬ್ಬ ದಸರಾ ಮಹೋತ್ಸವದ ಅಂಗವಾಗಿ ಇದೇ ದಿನಾಂಕ 13ರ ಬುಧವಾರ ದುರ್ಗಾಷ್ಟಮಿಯಂದು ಚಂಡಿಕಾ ಹೋಮ ಮತ್ತು ಅನ್ನ ಸಂತರ್ಪಣೆ ನಡೆಯಲಿದೆ.

ದಸರಾ ಹಬ್ಬದ ಪ್ರಯುಕ್ತ ಶ್ರೀ ದೇವಿಗೆ ಪ್ರತಿದಿನ ಅಭಿಷೇಕ ಮತ್ತು ವಿಶೇಷ ಅಲಂಕಾರಗಳು ನಡೆಯುತ್ತಿದ್ದು, ಈ ಎಲ್ಲಾ ಭಕ್ತಿ ಸೇವೆಯಲ್ಲಿ ಭಾಗವಹಿಸಲಿಚ್ಛಿಸುವ ಭಕ್ತರು ದೇವಸ್ಥಾನದಲ್ಲಿ ಅರ್ಚಕರನ್ನು ಸಂಪರ್ಕಿಸಬಹುದು.

## ಮಲೇಬೆನ್ನೂರಿನಲ್ಲಿ ಸೈಕ್ಲಿಂಗ್ ಕಿರಣ್‌ಗೆ ಸ್ವಾಗತ



ಮಲೇಬೆನ್ನೂರು, ಅ.10- ಅತ್ಯಾಚಾರಿಗಳಿಗೆ ಗಲ್ಲು ಶಿಕ್ಷೆ ನೀಡಲೇಬೇಕೆಂದು ಒತ್ತಾಯಿಸಿ, ಸೈಕಲ್ ಮೂಲಕ ರಾಜ್ಯದ ಎಲ್ಲಾ ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸುತ್ತಾ ಹೊರಟಿರುವ ಬೆಂಗಳೂರಿನ ಕಿರಣ್ ಅವರು ಭಾನುವಾರ ದಾವಣಗೆರೆಯಿಂದ ಶಿವಮೊಗ್ಗಕ್ಕೆ ತೆರಳುವ ಮಾರ್ಗಮಧ್ಯೆ ಮಲೇಬೆನ್ನೂರಿಗೆ ಆಗಮಿಸಿದಾಗ ಅವರನ್ನು ಸ್ವಾಗತಿಸಲಾಯಿತು.

ಪುರಸಭೆ ನಾಮಿನಿ ಸದಸ್ಯರಾದ ಪಿ.ಆರ್. ರಾಜು, ಎ.ಕೆ. ಲೋಕೇಶ್, ಪುರಸಭೆ ಮಾಜಿ ಸದಸ್ಯ ಯುಸೂಫ್, ಗ್ರಾ.ಪಂ. ಮಾಜಿ ಅಧ್ಯಕ್ಷ ಭೋವಿ ಕುಮಾರ್, ಹಾಲಿವಾಣದ ಮೋಹನ್, ಕೊಮಾರನಹಳ್ಳಿಯ ಜಿ. ಸುನೀಲ್ ಸೇರಿದಂತೆ ಇನ್ನೂ ಅನೇಕ ಯುವಕರು ಈ ವೇಳೆ ಹಾಜರಿದ್ದರು.

ನಂತರ ಕೊಮಾರನಹಳ್ಳಿಯಲ್ಲೂ ಕಿರಣ್ ಅವರನ್ನು ಸ್ವಾಗತಿಸಿ, ಬೀಳ್ಕೊಡಲಾಯಿತು. ಐರಣಿ ಅಣ್ಣಪ್ಪ, ಉದ್ದಣ್ಣರ ಅಣ್ಣಪ್ಪ, ಜಿ. ಸುನೀಲ್, ದರ್ಶನ್, ಆಕಾಶ್, ಅರ್ಜುನ್ ಮತ್ತಿತರರು ಇದ್ದರು.

## ಡಾ. ಎನ್.ಹೆಚ್. ಕೃಷ್ಣ ಅವರಿಗೆ ಸನ್ಮಾನ



ದಾವಣಗೆರೆ, ಅ.10 - ಕೋವಿಡ್ ಸಮಯದಲ್ಲಿ ಕಳೆದ ಒಂದೂವರೆ ವರ್ಷದಿಂದ ಭಾರತದಾದ್ಯಂತ 3500 ಶ್ವಾಸಕೋಶ ತಜ್ಞರಿಗೆ ಸತತವಾಗಿ ವೆಬಿನಾರ್ ನಡೆಸುವ ಮೂಲಕ ಅರಿವು ಮೂಡಿಸಿದ ಸೇವೆಯನ್ನು ಪರಿಗಣಿಸಿ ಚೆಸ್ಟ್ ಕೌನ್ಸಿಲ್ ಆಫ್ ಇಂಡಿಯಾ ಸಂಸ್ಥಾಪಕ ಚೇರ್ಮನ್ ಡಾ. ಎನ್.ಹೆಚ್. ಕೃಷ್ಣ ಅವರನ್ನು ರಾಜಸ್ತಾನದ ಜೈಪುರದಲ್ಲಿ ಸನ್ಮಾನಿಸಲಾಯಿತು.

ವೇದಿಕೆಯಲ್ಲಿ ರಾಜಸ್ತಾನದ ಸಿಸಿಐ ರಾಜ್ಯ ಪ್ರಮುಖ ಡಾ. ಅಂಕಿತ್ ಬನ್ಸಾಲ್, ರಾಜಸ್ತಾನದ ಸಿಸಿಐ ಸಂಚಾಲಕ ಡಾ. ವಿಕಾಸ್ ಪಿಲನಿಯ ಹಾಗೂ ಜೆಪಿಪಿಸಿಎಲ್ ಸಂಸ್ಥೆ ದಿಲೀಪ್ ಸಿಂಗ್ ರಾಥೋಡ್ ಉಪಸ್ಥಿತರಿದ್ದರು.



### ಹಳೇಬೇತೂರು ರಸ್ತೆಯ ಬನಶಂಕರಿ ದೇವಿಗೆ ಇಂದು ಈಶ್ವರಿ ದೇವಿ ಅಲಂಕಾರ

ದಾವಣಗೆರೆ, ಅ.10- ನಗರದ ಹಳೇ ಬೇತೂರು ರಸ್ತೆ ಶ್ರೀ ಬನಶಂಕರಿ ದೇವಿಗೆ ಇಂದು ಶ್ರೀ ಈಶ್ವರಿ ದೇವಿ ಅಲಂಕಾರ ಮಾಡಲಾಗಿದೆ.



### ಹರಿಹರ : ಶೃಂಗೇರಿ ಶಾರದಾಂಬೆ ಅಲಂಕಾರ

ಹರಿಹರ ನಗರದ ಹೊಸಭರಂಪುರ ಬಡಾವಣೆಯ ಶ್ರೀ ಕಸಬಾ ಗ್ರಾಮದೇವತೆ ಗೆ ನವರಾತ್ರಿ ಹಬ್ಬದ ಪ್ರಯುಕ್ತ ಇಂದು ಶೃಂಗೇರಿ ಶಾರದಾಂಭೆ ಅಲಂಕಾರ ಮಾಡಿ ಕುಂಕುಮಾರ್ಚನೆ, ವಿಶೇಷ ಪೂಜೆ ಮಾಡಲಾಯಿತು.



### ವಾಸವಿ ಅಮ್ಮನವರಿಗೆ ಕವಡೆ ಅಲಂಕಾರ

ದಾವಣಗೆರೆ, ಅ.10- ಡಿಸಿಎಂ ಟೌನ್‌ಶಿಪ್ ನಲ್ಲಿರುವ ವಾಸವಿ ಅಮ್ಮನವರ ದೇವಸ್ಥಾನದಲ್ಲಿ ಶ್ರೀ ವಾಸವಿ ಅಮ್ಮನವರಿಗೆ ಈ ದಿನ ಕವಡೆ ಅಲಂಕಾರ ಮಾಡಲಾಗಿತ್ತು.



### ಗಾಳಿ ದುರ್ಗಾಂಬಿಕಾ ದೇವಿಗೆ 4ನೇ ದಿನದ ಅಲಂಕಾರ

ದಾವಣಗೆರೆ, ಅ.10- ಕೆ.ಆರ್. ರಸ್ತೆ, ವೆಂಕಾಭೋವಿ ಕಾಲೋನಿಯಲ್ಲಿ ಶ್ರೀ ಬಸವೇಶ್ವರ ಸ್ವಾಮಿ, ಶ್ರೀ ಗಾಳಿ ದುರ್ಗಾಂಬಿಕಾ ದೇವಿಗೆ ಇಂದು ಶ್ರೀ ಸ್ಕಂದಮಾತಾ ಪೂಜಾಲಂಕಾರ ಮಾಡಲಾಗಿದೆ.

### ಕೊಂಡಜ್ಜಿ ರಸ್ತೆಯ ಬನ್ನಿ ಮಹಾಂಕಾಳಿ ದೇವಸ್ಥಾನದಲ್ಲಿ ವಿಶೇಷ ಅಲಂಕಾರ



ದಾವಣಗೆರೆ, ಅ.10- ಇಲ್ಲಿನ ಕೊಂಡಜ್ಜಿ ರಸ್ತೆಯ ಆರ್‌ಟಿಓ ಆಫೀಸ್ ಮುಂಭಾಗದ ಶ್ರೀ ಬನ್ನಿ ಮಹಾಂಕಾಳಿ ದೇವಿ ದೇವಸ್ಥಾನದಲ್ಲಿ ಶರನ್ನವರಾತ್ರಿ ಪ್ರಯುಕ್ತ ಶ್ರೀ ದೇವಿಗೆ ಇಂದು ವಿಶೇಷ ಅಲಂಕಾರ ಮಾಡಲಾಗಿತ್ತು. ಇದೇ ದಿನಾಂಕ 14ರ ಗುರುವಾರ ಭಕ್ತರಿಗೆ ಅನ್ನ ಸಂತರ್ಪಣೆ ಏರ್ಪಡಿಸಲಾಗಿದೆ.

## ಬ್ಯಾಂಕ್ ಅಧಿಕಾರಿಗಳ ಸಭೆ ಕರೆಯಲಿ

ದಾವಣಗೆರೆ, ಅ.10- ಪ್ರಧಾನಮಂತ್ರಿಗಳ ಗ್ರಾಮೀಣ ವಸತಿ ನಿರ್ಮಾಣ ಯೋಜನೆಗಳು ಅಧಿಕಾರಿಗಳ ನಿರ್ಲಕ್ಷ್ಯ ಧೋರಣೆಯಿಂದಾಗಿ ಅರ್ಹ ಫಲಾನುಭವಿಗಳನ್ನು ತಲುಪದೇ ಇರುವ ಕಾರಣ ಕೂಡಲೇ ಲೀಡ್ ಬ್ಯಾಂಕ್, ಕೆನರಾ ಬ್ಯಾಂಕ್, ಎಸ್‌ಬಿಐ ವರಿಷ್ಠಾಧಿಕಾರಿಗಳ ಸಭೆ ಕರೆಯುವಂತೆ ಗ್ರಾಮೀಣ ವಸತಿ ನಿರ್ಮಾಣ ಯೋಜನೆ ಅಡಿಯಲ್ಲಿ ಮಾಯಕೊಂಡ ಮತ್ತು ಹುಚ್ಚವ್ವನಹಳ್ಳಿ ಗ್ರಾಮ ಪಂಚಾಯತಿ ವಸತಿ ನಿರ್ಮಾಣ ಟ್ರಸ್ಟ್ ಪ್ರಧಾನ ಕಚೇರಿ ಮಾಯಕೊಂಡ ಇದರ ಅಧ್ಯಕ್ಷ ಎಂ.ಎಸ್.ಕೆ. ಶಾಸ್ತ್ರಿ ಒತ್ತಾಯಿಸಿದ್ದಾರೆ.

ಈ ವಸತಿ ಯೋಜನೆಯು ಮಾರ್ಚ್ -2022 ರವರೆಗೆ ಮಾತ್ರ ಇರುತ್ತದೆ. ಉತ್ತರ ಪ್ರದೇಶದಲ್ಲಿ ಈಗಾಗಲೇ ಮೂರು ಕೋಟಿ ಎಪ್ಪತ್ತೈದು ಲಕ್ಷ ಜನ ಬಡವರಿಗೆ ಇದೇ ಗ್ರಾಮೀಣ ವಸತಿ ಯೋಜನೆ ಅಡಿಯಲ್ಲಿ ವ್ಯವಸ್ಥಿತವಾದ ಮನೆಯನ್ನು ನಿರ್ಮಿಸಿ ಕೊಟ್ಟು, ಗಾಂಧಿ ಜಯಂತಿ ದಿನದಂದು ಲಕ್ನೋ ನಗರದಲ್ಲಿ ಬೀಗದ ಕೈಯನ್ನು ಪ್ರಧಾನಿಗಳು ವಿತರಿಸಿದ್ದಾರೆಂದು ಶಾಸ್ತ್ರಿ ತಿಳಿದ್ದಾರೆ.

ದಾವಣಗೆರೆ ಜಿಲ್ಲೆಯಲ್ಲಿ ಮಾತ್ರ ಈ ಯೋಜನೆ ಅನುಷ್ಠಾನಗೊಳ್ಳುವಲ್ಲಿ ಎಡವಿದೆ. ನ್ಯೂನತೆಗಳ ಬಗ್ಗೆ ಚರ್ಚಿಸಲು ಟ್ರಸ್ಟ್ ಪದಾಧಿಕಾರಿಗಳ ಜೊತೆ ಬ್ಯಾಂಕ್ ಅಧಿಕಾರಿಗಳು ಸಭೆ ಕರೆದು ಚರ್ಚಿಸಲಿ ಎಂದು ಮನವಿ ಮಾಡಿದ್ದಾರೆ.

## ರೈಲಿನಲ್ಲಿ ಮರೆತಿದ್ದ ಚಿನ್ನಾಭರಣವುಳ್ಳ ವ್ಯಾನಿಟ್ ಬ್ಯಾಗ್

**ವಾರಸುದಾರರಿಗೆ ಮರಳಿಸಿದ ರೈಲ್ವೇ ಪೊಲೀಸ್ ತಂಡ**

ದಾವಣಗೆರೆ, ಅ.10- ರೈಲಿನಲ್ಲಿ ಪ್ರಯಾಣಿಸುವಾಗ ಮರೆತು ಬಿಟ್ಟಿದ್ದ 7 ಲಕ್ಷಕ್ಕೂ ಅಧಿಕ ಮೌಲ್ಯದ ಚಿನ್ನಾಭರಣಗಳುಳ್ಳ ವ್ಯಾನಿಟ್ ಬ್ಯಾಗನ್ನು ಮರಳಿಸುವ ಮೂಲಕ ಇಲ್ಲಿನ ರೈಲ್ವೇ ಪೊಲೀಸರು ಮತ್ತು ರೈಲ್ವೇ ಭದ್ರತಾ ಪಡೆಯು ಮಾನವೀಯತೆ ಮೆರೆದಿವೆ.

ಹರಿಹರ ತಾಲ್ಲೂಕು ಕುಂಬಳೂರು ಗ್ರಾಮದ ಶ್ರೀನಿವಾಸ ರಾಜು ದಂಪತಿ ಸಮೇತ ಮೈಸೂರಿನಿಂದ ಸೊಲ್ಲಾಪುರ ಎಕ್ಸ್‌ಪ್ರೆಸ್ ರೈಲಿನಲ್ಲಿ ಕೆಂಗೇರಿಯಿಂದ ಹರಿಹರಕ್ಕೆ ಹೋಗಿ, ಹರಿಹರದಲ್ಲಿ ರೈಲು ಇಳಿಯುವಾಗ ಶ್ರೀನಿವಾಸ ಅವರ ಪತ್ನಿ ಸುಮಾರು 7,31,700 ರೂ. ಮೌಲ್ಯದ ಚಿನ್ನಾಭರಣಗಳಿದ್ದ ವ್ಯಾನಿಟಿ ಬ್ಯಾಗ್ ಮರೆತ್ತಿದ್ದರು. ನಂತರ ವ್ಯಾನಿಟಿ ಬ್ಯಾಗ್ ಬಗ್ಗೆ ಅರಿವಿಗೆ ಬರುತ್ತಿದ್ದಂತೆಯೇ ರೈಲ್ವೆ ಇಲಾಖೆಗೆ ದೂರು ನೀಡಿದ್ದರು.

ದೂರು ಸ್ವೀಕರಿಸಿದ ಮೈಸೂರು ವಿಭಾಗೀಯ ಭದ್ರತಾ ನಿಯಂತ್ರಕರು ಅಗತ್ಯ ಸಹಾಯಕ್ಕಾಗಿ ದಾವಣಗೆರೆ ರೈಲ್ವೆ ಭದ್ರತಾ ಪಡೆಗೆ ಸೂಕ್ತ ಕ್ರಮಕ್ಕೆ ನಿರ್ದೇಶಿಸಿದರು. ವ್ಯಾನಿಟಿ ಬ್ಯಾಗನ್ನು ಆರ್‌ಪಿಎಫ್‌ನ ಎಎಸ್‌ಐ ವೆಂಕಟೇಶಮೂರ್ತಿ, ರೈಲು ಬೆಂಗಾವಲು ಸಿಬ್ಬಂದಿಗಳಾದ ಶಿವಾನಂದ, ಎಂ.ಡಿ. ಷಫೀವುಲ್ಲಾ ಇತರೆ ಸಿಬ್ಬಂದಿ ಪತ್ತೆ ಮಾಡಿದರು. ನಂತರ ದಾವಣಗೆರೆ ಆರ್‌ಪಿಎಫ್ ಅಧಿಕಾರಿಗಳಿಗೆ ಒಪ್ಪಿಸಿದರು.





## ನಗರದಲ್ಲಿ ಇಂದು ವಿಶ್ವ ಮಾನಸಿಕ ಆರೋಗ್ಯ ದಿನಾಚರಣೆ

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಜಿಲ್ಲಾ ಮಾನಸಿಕ ಆರೋಗ್ಯ ಕಾರ್ಯಕ್ರಮ, ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರ, ಮನೋವೈದ್ಯಕೀಯ ವಿಭಾಗ, ಜೆ.ಜೆ.ಎಂ ವೈದ್ಯಕೀಯ ಮಹಾವಿದ್ಯಾಲಯ ಇವರ ಸಂಯುಕ್ತಾಶ್ರಯದಲ್ಲಿ ವಿಶ್ವ ಮಾನಸಿಕ ಆರೋಗ್ಯ ದಿನಾಚರಣೆ ಕಾರ್ಯಕ್ರಮವು ಇಂದು ಬೆಳಿಗ್ಗೆ 10 ಗಂಟೆಗೆ ಜೆ.ಜೆ.ಎಂ ವೈದ್ಯಕೀಯ ಮಹಾವಿದ್ಯಾಲಯ ಲೈಬ್ರರಿ ಹಾಲ್ (ಸಭಾಂಗಣ) ನಲ್ಲಿ ನಡೆಯಲಿದೆ.

ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರಾದ ರಾಜೇಶ್ವರಿ ಎನ್. ಹೆಗಡೆ ಅವರು ಕಾರ್ಯಕ್ರಮವನ್ನು ಉದ್ಘಾಟಿಸುವರು. ಕಾಲೇಜಿನ ಪ್ರಾಂಶುಪಾಲ ಡಾ. ಎಸ್.ಬಿ. ಮುರುಗೇಶ್ ಅಧ್ಯಕ್ಷತೆ ವಹಿಸುವರು. ಮನೋವೈದ್ಯಕೀಯ ವಿಭಾಗದ ಹಿರಿಯ ಪ್ರಾಧ್ಯಾಪಕ ಡಾ.ಕೆ. ನಾಗರಾಜರಾವ್ ಉಪನ್ಯಾಸ ನೀಡುವರು.


ಮುಖ್ಯ ಅತಿಥಿಗಳು : ಎಸ್ಪಿ ಸಿ.ಬಿ.ರಿಷ್ಯಂತ್, ಹಿರಿಯ ಸಿವಿಲ್ ನ್ಯಾಯಾಧೀಶರಾದ ಪ್ರವೀಣ್ ನಾಯಕ್, ಸಹಾಯಕ ನಿರ್ದೇಶಕರು, ಅಭಿಯೋಜನ ಇಲಾಖೆ ಮತ್ತು ಕಾನೂನು ಅಧಿಕಾರಿಗಳು (ಹಿರಿಯ) ಕೆ.ಜಿ. ಕಲ್ಪನಾ. ಡಿಹೆಚ್‌ಓ ಡಾ, ನಾಗರಾಜ, ಜಿಲ್ಲಾ ಕುಷ್ಠರೋಗ ನಿವಾರಣಾಧಿಕಾರಿ ಪಿ.ಡಿ. ಡಾ.ಮುರುಳಿಧರ.

## ಗಾಂಧೀಜಿ ಕೊಂದವರ ಕೈಯಲ್ಲಿ ದೇಶಾಡಳಿತ : ಡಿ.ಬಿ ಆತಂಕ

ದಾವಣಗೆರೆ, ಅ.10- ರಾಷ್ಟ್ರಪಿತ ಮಹಾತ್ಮ ಗಾಂಧೀಜಿಯವರ ನೇತೃತ್ವದಲ್ಲಿ ಕೋಟ್ಯಾಂತರ ಜನರ ತ್ಯಾಗ, ಬಲಿದಾನದಿಂದ ಅಹಿಂಸಾ ಮಾರ್ಗದ ಮೂಲಕ ಭಾರತ ದೇಶ ಸ್ವಾತಂತ್ರ್ಯವನ್ನು ಪಡೆದಿರುವುದು ಇತಿಹಾಸ.

ಆದರೆ, ಇಂದು ಗಾಂಧೀಜಿಯವರನ್ನು ಅಮಾನುಷವಾಗಿ ಹತ್ಯೆಗೈದ ಹಂತಕ ನಾಥೂರಾಮ್ ಗೋಡ್ಸೆ ಹಿಂಬಾಲಕರ ಕೈಯಲ್ಲಿ ದೇಶದ, ರಾಜ್ಯದ ಆಡಳಿತವಿದೆ ಎಂದು ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿಯ ರಾಜ್ಯ ವಕ್ತಾರ ಡಿ. ಬಸವರಾಜ್ ಆತಂಕ ವ್ಯಕ್ತಪಡಿಸಿದರು.

ನಗರದ ಎಂ.ಸಿ.ಸಿ. 'ಎ' ಬ್ಲಾಕ್‌ನಲ್ಲಿ ಜಿಲ್ಲಾ ಕಾಂಗ್ರೆಸ್ ಇಂಟೆಕ್ ವಿಭಾಗದಿಂದ ಏರ್ಪಡಿಸಿದ್ದ ಗಾಂಧೀಜಿ, ಲಾಲ್‌ಬಹದ್ದೂರ್ ಶಾಸ್ತ್ರೀಜಿ ಜನ್ಮದಿನಾಚರಣೆ ಸಮಾರಂಭದಲ್ಲಿ ಮಹಾತ್ಮರ ಭಾವಚಿತ್ರಗಳಿಗೆ ಪುಷ್ಪ ನಮನ ಸಲ್ಲಿಸಿ ಅವರು ಮಾತನಾಡಿದರು.



ದೇಶದ ಬಡತನವನ್ನು ಕಣ್ಣಾರೆ ಕಂಡು ತುಂಡು ಉಡುಗೆ ತೊಟ್ಟು ಸರಳ ಜೀವನ ನಡೆಸಿದ ಗಾಂಧೀಜಿ ಆದರ್ಶರಾಗಿದ್ದಾರೆ. ಹತ್ತು ಲಕ್ಷ ರೂ.ಗಳ ಸೂಟ್, ಬೂಟ್ ತೊಟ್ಟವ ರಲ್ಲವೆಂದು ಪ್ರಧಾನಿ ನರೇಂದ್ರ ಮೋದಿಯ ವರನ್ನು ಪರೋಕ್ಷವಾಗಿ ಟೀಕಿಸಿದರು.

ಕೋಮುವಾದಿಗಳು ಗಾಂಧೀಜಿಯವರನ್ನು ಕೊಂದಿರಬಹುದು, ಆದರೆ, ಗಾಂಧಿ ಆದರ್ಶಗಳನ್ನಲ್ಲ ಎಂದು ಅವರು ಪ್ರತಿಪಾದಿಸಿದರು.

ಬಿಜೆಪಿ ಮತ್ತು ನರೇಂದ್ರ ಮೋದಿಯವರು ಮಹಾತ್ಮ ಗಾಂಧೀಜಿ, ಡಾ. ಬಿ.ಆರ್. ಅಂಬೇಡ್ಕರ್, ಲಾಲ್ ಬಹದ್ದೂರ್ ಶಾಸ್ತ್ರಿಯಂತಹ ಮಹಾತ್ಮರ ಮೇಲೆ ಕೇವಲ ಹುಸಿ ಪ್ರೀತಿಯನ್ನು ತೋರಿಸುತ್ತಾರೆಂದು ಅವರು ಲೇವಡಿ ಮಾಡಿದರು.

ಲಾಲ್ ಬಹದ್ದೂರ್ ಶಾಸ್ತ್ರಿಯವರು ರೈಲ್ವೆ ಮಂತ್ರಿಗಳಾಗಿದ್ದಾಗ ಎಲ್ಲೋ ಒಂದು ರೈಲು ಅಪಘಾತವಾದಾಗ ನೈತಿಕ ಹೊಣೆ ಹೊತ್ತು ರಾಜೀನಾಮೆ ನೀಡಿದ್ದರು. ಆದರೆ ಇಂದು ದೇಶದಲ್ಲಿ ತಮ್ಮ ಆಡಳಿತ ವೈಫಲ್ಯದ ಮೂಲಕ ಕೋವಿಡ್-19 ಉಲ್ಬಣಗೊಳ್ಳುವಂತೆ ಮಾಡಿ ಲಕ್ಷಾಂತರ ಜನರ ಸಾವಿಗೆ ಕಾರಣರಾಗಿದ್ದರೂ ಸಹ ಶೋಕಿಲಾಲ್‌ನಂತೆ ಮೆರೆಯುತ್ತಿದ್ದಾರೆಂದು ಮೋದಿ ಆಡಳಿತನ್ನು ಅವರು ಕುಟುಕಿದರು.

ಸಮಾರಂಭದಲ್ಲಿ ಜಿಲ್ಲಾ ಕಾಂಗ್ರೆಸ್ ಇಂಟೆಕ್ ಅಧ್ಯಕ್ಷ ಕೆ.ಎಂ. ಮಂಜುನಾಥ್, ಹರಿಹರ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಎಲ್.ಬಿ. ಹನುಮಂತಪ್ಪ, ಕಾಂಗ್ರೆಸ್ ಮುಖಂಡರು ಗಳಾದ ಮಂಜುನಾಥ ಸಾಂಬೋಜಿ, ಡಿ. ಶಿವಕುಮಾರ್, ಸುರೇಶ್, ಶ್ರೀಕಾಂತ್, ಬಿ. ಮಂಜುನಾಥ್, ನಾಗರಾಜ್, ಮಾರುತಿರಾವ್ ಹಾಗೂ ಇತರರು ಹಾಜರಿದ್ದರು.

## ಮಳೆಗೆ ಪಡಿತರ ವಿತರಕನ ಮನೆ ಕುಸಿತ ಐವರು ಪವಾಡ ಸದೃಶವಾಗಿ ಪಾರು



ದಾವಣಗೆರೆ, ಅ.10- ಭಾರೀ ಮಳೆಯಿಂದಾಗಿ ಕ್ಷಣಾರ್ಧದಲ್ಲೇ ಪಡಿತರ ವಿತರಕನ ಮನೆ ಕುಸಿದು ಬಿದ್ದಿದ್ದು, ಪವಾಡ ಸದೃಶವಾಗಿ ಮನೆಯಲ್ಲಿದ್ದ ಐವರು ಪಾರಾಗಿರುವ ಘಟನೆ ತಾಲ್ಲೂಕಿನ ಐಗೂರು ಗೊಲ್ಲರಹಟ್ಟಿಯಲ್ಲಿ ಇಂದು ಸಂಜೆ ನಡೆದಿದೆ.

ಪಡಿತರ ಧಾನ್ಯ ವಿತರಕ ಸಿದ್ದಪ್ಪ ದಂಪತಿ, ಇಬ್ಬರು ಮಕ್ಕಳು ಹಾಗೂ ತಂದೆ ಇದ್ದರು. ಮನೆಯಲ್ಲಿ ಐವರು ಕುಳಿತಿರುವಾಗ ನೋಡ ನೋಡುತ್ತಲೇ ಮನೆ ಕುಸಿದಿದೆ. ಯಾವುದೇ ಅಪಾಯ ಸಂಭವಿಸಿಲ್ಲ. ಆದರೆ, ಮಣ್ಣಿನಲ್ಲಿ ದವಸ, ಧಾನ್ಯ, ಬಟ್ಟೆ, ಇತರೆ ಸಾಮಗ್ರಿಗಳು ಹೂತಿವೆ.

ಜಿಲ್ಲೆಯಲ್ಲಿ ವಾರದಿಂದ ಭಾರೀ ಮಳೆ ಸುರಿದ ಕಾರಣ ಇಲ್ಲಿವರೆಗೆ ತಾಲ್ಲೂಕಿನಲ್ಲಿ ಸುಮಾರು 20 ಕ್ಕೂ ಹೆಚ್ಚು ಮನೆಗಳು ಕುಸಿದಿವೆ.

## ವಿದ್ಯುತ್ ಸ್ಪರ್ಶಿಸಿ ಯುವಕನ ಸಾವು



ದಾವಣಗೆರೆ, ಅ.10- ವಿದ್ಯುತ್ ಸ್ಪರ್ಶಿಸಿ ಯುವಕನೋರ್ವ ಸಾವಿಗೀಡಾಗಿರುವ ಘಟನೆ ಇಲ್ಲಿನ ಯಲ್ಲಮ್ಮ ನಗರದ ಕುಂದುವಾಡ ರಸ್ತೆಯ ಬಳಿ ಇಂದು ರಾತ್ರಿ ನಡೆದಿದೆ. ಭರತ್ ಕಾಲೋನಿಯ ಮನೋಜ್ ಮಜ್ಜಿಗೆ (21) ಮೃತಪಟ್ಟಿರುವ ಯುವಕ. ಈತ ಮೂತ್ರ ವಿಸರ್ಜನೆಗೆ ಹೋದ ಸಂದರ್ಭದಲ್ಲಿ ಮಳೆಯ ಹಿನ್ನೆಲೆಯಲ್ಲಿ ವಿದ್ಯುತ್ ಕಂಬ ಗ್ರೌಂಡ್ ಆಗಿ ಈತನಿಗೆ ವಿದ್ಯುತ್ ಸ್ಪರ್ಶಿಸಿ ಸ್ಥಳದಲ್ಲೇ ಸಾವನ್ನಪ್ಪಿದ್ದಾನೆ ಎನ್ನಲಾಗಿದೆ. ಘಟನಾ ಸ್ಥಳಕ್ಕೆ ಬಡಾವಣೆ ಠಾಣೆಯ ಪೊಲೀಸರು ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ.

